**ಕರ್ನಾಟಕ ಸರ್ಕಾರ**

**ಕೌಶಲ್ಯಾಭಿವೃದ್ದಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ**

Empowerment through livelihood

# ವಾರ್ಷಿಕ ವರದಿ 2016–17

## "ಸಂಜೀವಿನಿ"– ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ

**ಅಭಿಯಾನ ನಿರ್ದೇಶಕರ ಕಛೇರಿ,**

**ನಂ.55, ಅಭಯ ಸಂಕೀರ್ಣ, 4ನೇ ಮಹಡಿ, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560020**

**ದೂ: 080–23083000, ಫ್ಯಾಕ್ಸ್: 080–23083013**

**ಇ–ಮೈಲ್: nrlmkarnataka@gmail.com**

## "ಸಂಜೀವಿನಿ"– ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಎಸ್‌ಜಿಎಸ್‌ವೈ ಯೋಜನೆಯನ್ನು ಪುನರ್ ರಚಿಸಿ ಆಜೀವಿಕ – ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್‌ಆರ್‌ಎಲ್‌ಎಂ) 2010–11ರಿಂದ ಜಾರಿಗೊಳಿಸಿದೆ. ಇದರನ್ವಯ ರಾಜ್ಯ ಸರ್ಕಾರವು ರಾಜ್ಯದಲ್ಲಿ ಆಜೀವಿಕ ಯೋಜನೆಯನ್ನು "ಸಂಜೀವಿನಿ" ಹೆಸರಿನಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ (ಕೆಎಸ್‌ಆರ್‌ಎಲ್‌ಪಿಎಸ್) ಮೂಲಕ ಹಂತ ಹಂತವಾಗಿ ಜಾರಿಗೊಳಿಸಲಾಗುತ್ತಿದೆ.

ಪ್ರಥಮ ಹಂತದಲ್ಲಿ, ರಾಜ್ಯದ 5 ಜಿಲ್ಲೆಗಳ 20 ತಾಲ್ಲೂಕುಗಳಲ್ಲಿ ಯೋಜನೆಯನ್ನು ಇಂಟೆನ್ಸೀವ್ ತಾಲ್ಲೂಕುಗಳಾಗಿ (Intensive Block) ಅನುಷ್ಠಾನಗೊಳಿಸಲಾಗುತ್ತಿದೆ. ಅವುಗಳೆಂದರೆ, **ಮೈಸೂರು** ಜಿಲ್ಲೆ (ಹೆಚ್.ಡಿ. ಕೋಟೆ, ಹುಣಸೂರು, ನಂಜನಗೂಡು, ಟಿ.ನರಸೀಪುರ), **ತುಮಕೂರು** ಜಿಲ್ಲೆ (ಪಾವಗಡ, ಚಿಕ್ಕನಾಯಕನಹಳ್ಳಿ, ಮಧುಗಿರಿ, ಶಿರಾ), **ಗದಗ** ಜಿಲ್ಲೆ (ಶಿರಹಟ್ಟಿ, ನರಗುಂದ, ಗದಗ, ಮುಂಡರಗಿ, ರೋಣ), **ಕೊಪ್ಪಳ** ಜಿಲ್ಲೆ (ಯಲಬುರ್ಗಾ, ಕುಷ್ಟಗಿ, ಕೊಪ್ಪಳ) ಹಾಗೂ **ಉತ್ತರ ಕನ್ನಡ** ಜಿಲ್ಲೆ (ಅಂಕೋಲ, ಜೋಯಿಡ, ಕುಮುಟ, ಯಲ್ಲಾಪುರ). ಹಿಂದುಳಿದ ತಾಲ್ಲೂಕುಗಳನ್ನು ಪರಿಗಣಿಸಿರುವ ಡಾ॥ ನಂಜುಂಡಪ್ಪರವರ ಸಮಿತಿ ವರದಿ ಆಧಾರದ ಮೇಲೆ 2015–16ನೇ ಸಾಲಿನಲ್ಲಿ ಅಧಿಕ 64 ತಾಲ್ಲೂಕುಗಳನ್ನು ಇಂಟೆನ್ಸೀವ್ ವ್ಯಾಪ್ತಿಗೆ ಪರಿಗಣಿಸಲಾಗಿದೆ ಉಳಿದ ಜಿಲ್ಲೆ ಮತ್ತು ತಾಲ್ಲೂಕುಗಳನ್ನು ಹಂತಗಳಲ್ಲಿ ಇಂಟೆನ್ಸೀವ್ ಕಾರ್ಯ ವ್ಯಾಪ್ತಿಗೆ ಅಳವಡಿಸಲು ಅನುಮೋದನೆಯನ್ನು ದಿನಾಂಕ: 05.09.2015 ರಂದು ಸಂಜೀವಿನಿ ಸಂಸ್ಥೆಯ 5ನೇ ಕಾರ್ಯಕಾರಿ ಸಮಿತಿ ಮತ್ತು ದಿನಾಂಕ: 19.10.2015 ರಂದು ನಡೆದ ಮೊದಲನೇ ಸಾಮಾನ್ಯ ಸಭೆಯಲ್ಲಿ ಪಡೆಯಲಾಗಿದೆ. ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ : ಇಂಟೆನ್ಸೀವ್ ಕಾರ್ಯತಂತ್ರ ಹಂತವಾರು ಯೋಜನೆ**

| ಹಂತ | ವರ್ಷ | ಜಿಲ್ಲೆಗಳು | ತಾಲ್ಲೂಕುಗಳು |
|---|---|---|---|
| I | 2014–15 | 5 | 20 |
| II | 2015–16 | 20 | 64 |
| III | 2016–17 | 5 | 92 |
| **ಒಟ್ಟು** | | **30** | **176** |

**2016–17ನೇ ಸಾಲಿನಲ್ಲಿ "ಸಂಜೀವಿನಿ"– (ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆ)ಯಡಿ ಸಾಧಿಸಿರುವ ಪ್ರಗತಿಯ ವಿವರ:**

ಕೆಎಸ್‌ಆರ್‌ಎಲ್‌ಎಂಗೆ ಸಂಬಂಧಿಸಿದಂತೆ 2016–17ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಗೆ ಭಾರತ ಸರ್ಕಾರದ Empowered Committee ಯು ಚಟುವಟಿಕೆಗಳಿಗೆ ಅನುಮೋದಿಸಿ ಕೆಳಕಂಡಂತೆ ಹಂಚಿಕೆ ನೀಡಿದೆ.

**ವಾರ್ಷಿಕ ಕ್ರಿಯಾ ಯೋಜನೆ**

| ಕ್ರಮ ಸಂಖ್ಯೆ | ವಿವರ | ಹಂಚಿಕೆ (ರೂ.ಲಕ್ಷಗಳಲ್ಲಿ) | | |
|---|---|---|---|---|
| | | ಕೇಂದ್ರ | ರಾಜ್ಯ | ಒಟ್ಟು |
| 1 | ಎನ್‌ಆರ್‌ಎಲ್‌ಪಿ | 2369.00 | 1579.33 | 3948.33 |
| 2 | ಎನ್‌ಆರ್‌ಎಲ್‌ಎಂ * (ಆಡಳಿತಾತ್ಮಕ ವೆಚ್ಚ ಸೇರಿ) | 1535.07 | 1023.38 | 2558.45 |
| 3 | ಸರಸ್ ಮೇಳ* | 0.00 | 35.00 | 35.00 |
| 4 | ಆರ್‌ಸೆಟಿ | 726.00 | 0.00 | 726.00 |
| | **ಒಟ್ಟು** | **4630.07** | **2637.71** | **7267.78** |

***ಸರಸ್ ಮೇಳವನ್ನು ಆಯೋಜಿಸಿದಲ್ಲಿ ರೂ.35.00 ಲಕ್ಷ ಹಾಗೂ ಆರ್‌ಸೆಟಿಗೆ ತಲಾ ರೂ.22.00 ಲಕ್ಷ ಅನುದಾನಕ್ಕೆ ಅನುಮೋದನೆ ನೀಡಲಾಗಿದೆ.**

**ನೇಮಕಾತಿ:**

ಕೆಎಸ್‌ಆರ್‌ಎಲ್‌ಎಂ ಅಭಿಯಾನಕ್ಕೆ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದ್ದು, 291 ಅಧಿಕಾರಿ/ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸಿಬ್ಬಂದಿಗಳ ವಿವರ ಈ ಕೆಳಕಂಡಂತಿದೆ:

**ಸಿಬ್ಬಂದಿಗಳ ವಿವರ**

| ಘಟಕ | ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ |
|---|---|
| ರಾಜ್ಯ ಅಭಿಯಾನ ನಿರ್ವಹಣಾ ಘಟಕ (ಎಸ್‌ಎಂಎಂಯು) | 35 |
| ಜಿಲ್ಲಾ ಅಭಿಯಾನ ನಿರ್ವಹಣಾ ಘಟಕ (ಡಿಎಂಎಂಯು) | 39 |
| ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕ (ಟಿಎಂಎಂಯು) | 131 |
| ಎನ್‌ಆರ್‌ಎಲ್‌ಎಂ | 82 |
| **ಒಟ್ಟು** | **287** |

**ಜಿಲ್ಲಾವಾರು ಸಿಬ್ಬಂದಿ ನೇಮಕಾತಿ ವಿವರ**

**ಜಿಲ್ಲಾವಾರು ಸಿಬ್ಬಂದಿಗಳ ವಿವರ**

| ಕ್ರ.ಸಂ | ಜಿಲ್ಲೆಯ ಹೆಸರು | ಡಿಎಂಎಂಯು | ಟಿಎಂಎಂಯು | ಒಟ್ಟು |
|---|---|---|---|---|
| 1 | ಮೈಸೂರು | 09 | 27 | 36 |
| 2 | ಉತ್ತರ ಕನ್ನಡ | 09 | 23 | 32 |
| 3 | ಗದಗ್ | 05 | 32 | 37 |
| 4 | ಕೊಪ್ಪಳ | 09 | 28 | 37 |
| 5 | ತುಮಕೂರು | 07 | 21 | 28 |
| | **ಇಂಟೆನ್ಸೀವ್ ಒಟ್ಟು** | **39** | **131** | **170** |
| 6 | ಎಸ್‌ಎಂಎಂಯು | – | – | 35 |
| 7 | ಎನ್‌ಆರ್‌ಎಲ್‌ಎಂ | – | – | 82 |
| | **ಒಟ್ಟು** | | | **287** |

**ಸಾಂಸ್ಥಿಕ ಸಂಸ್ಥೆಗಳ ರಚನೆ ಮತ್ತು ಬಲವರ್ಧನೆ:**

ಬಡವರನ್ನು ಕ್ರೋಢೀಕರಿಸಿ ಅವರದೇ ಆದ ಸಂಸ್ಥೆಗಳನ್ನು ರಚಿಸಿ ಸಾಮರ್ಥ್ಯ ಬಲವರ್ಧನೆ ಮಾಡುವುದು ಬಡತನ ನಿರ್ಮೂಲನೆ ಮಾಡಲು ಅತ್ಯಗತ್ಯವಾಗಿರುತ್ತದೆ. ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನವು ಬಡತನದಲ್ಲಿರುವ ಎಲ್ಲಾ ಮಹಿಳೆಯರನ್ನು ಒಂದುಗೂಡಿಸಿ ಮಾಹಿತಿ ಪಡೆಯಲು ಮತ್ತು ವಿಷಯ ವಿನಿಮಯ ಮಾಡಿಕೊಳ್ಳಲು ಸಾಂಸ್ಥಿಕ ಸಂಘಟನೆಗಳು ಮತ್ತು ಸಂಸ್ಥೆಗಳನ್ನು ರಚಿಸುವುದರ ಮೂಲಕ ಕಡು ಬಡತನದಲ್ಲಿರುವ ಮಹಿಳೆಯರಿಗೆ ಒಂದು ವೇದಿಕೆಯನ್ನು ಸೃಷ್ಟಿಸಲಾಗಿದೆ. ಬಡವರಿಂದ ಮತ್ತು ಬಡವರಿಗಾಗಿ ರಚಿಸಲ್ಪಟ್ಟ ಈ ಸಂಸ್ಥೆಗಳು ಸ್ಥಳೀಯ ಸರ್ಕಾರದೊಂದಿಗೆ, ವಿವಿಧ ಸೇವೆಗಳನ್ನು ನೀಡುತ್ತಿರುವ ಸಂಸ್ಥೆಗಳೊಂದಿಗೆ, ಬ್ಯಾಂಕ್‌ಗಳೊಂದಿಗೆ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘಟನೆಗಳೊಂದಿಗೆ ಹಾಗೂ ಇತರೆ ಸಂಸ್ಥೆಗಳೊಂದಿಗೆ ಕಾರ್ಯನಿರ್ವಹಿಸಿ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳನ್ನು ಒದಗಿಸಲು ನೆರವಾಗುತ್ತವೆ. ವಿವಿಧ ಹಂತದಲ್ಲಿ ಸಂಸ್ಥೆಗಳನ್ನು ರಚಿಸುವುದರಿಂದ ಬಡ ಮಹಿಳೆಯರಿಗೆ ಒಗ್ಗಟ್ಟಾಗಿ ತಮ್ಮ ಹಕ್ಕುಗಳ ಬಗ್ಗೆ ಮಾತನಾಡಲು ಹೆಚ್ಚಿನ ಅವಕಾಶವನ್ನು ಕೊಡುವುದರೊಂದಿಗೆ ಆರ್ಥಿಕ ಸಮಾನತೆಯನ್ನು ಒದಗಿಸಲು ನೆರವಾಗುತ್ತೀವೆ.

ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟವು ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಿ, ಅವರುಗಳ ಮೂಲಕ ಸಾಮಾಜಿಕ ಕ್ರೋಢೀಕರಣ ಪ್ರಕ್ರಿಯೆಯನ್ನು ಮುಂದುವರಿಸಲಾಗುತ್ತಿದೆ. ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟವು ಸ್ವ ಸಹಾಯ ಗುಂಪುಗಳ ಸಾಮರ್ಥ್ಯ ಬಲವರ್ಧನೆ ಬಗ್ಗೆ ವಿಶ್ಲೇಷಿಸಿ ಅಗತ್ಯತೆಗೆ ಅನುಸಾರವಾಗಿ ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟವು ಕಿರು ಬಂಡವಾಳ ಹೂಡಿಕೆ ಯೋಜನೆ ತಯಾರಿಸಲು ಮತ್ತು ಸ್ವಸಹಾಯ ಗುಂಪುಗಳಿಗೆ ಕಿರು ಬಂಡವಾಳ ನಿಧಿಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್ ಸಂಪರ್ಕವನ್ನು ಕಲ್ಪಿಸಿ ಅಗತ್ಯತೆಗೆ ಅನುಸಾರವಾಗಿ ಸ್ವಸಹಾಯ ಗುಂಪುಗಳಿಗೆ ಸಾಲವನ್ನು ಪಡೆಯಲು ಸಹಕಾರ ನೀಡುತ್ತಿವೆ. ಗ್ರಾಮೀಣ ಜೀವನೋಪಾಯ ಕಾರ್ಯಕ್ರಮದ ಭಾಗವಾಗಿ ಗ್ರಾಮ ಪಂಚಾಯತ್ ಜೊತೆಗೆ ಅಭಿಗಮನ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯತ್ ಒಕ್ಕೂಟವು ಕೈಗೊಳ್ಳುತ್ತವೆ.

- ಕಳೆದ ಮೂರು ವರ್ಷಗಳಲ್ಲಿ ಸಂಜೀವಿನಿ ಯೋಜನೆಯಡಿಯಲ್ಲಿ ಸ್ವ ಸಹಾಯ ಗುಂಪುಗಳ ಬಲವರ್ಧನೆಗೆ ಹಲವಾರು ಕ್ರಮಗಳನ್ನು ಕೈಗೊಂಡು, ಕ್ಷೇತ್ರ ಮಟ್ಟದಲ್ಲಿ ಸ್ವ ಸಹಾಯ ಗುಂಪುಗಳನ್ನು ಒಗ್ಗೂಡಿಸಿ, ವಾರ್ಡ್ ಮತ್ತು ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳನ್ನು ರಚಿಸಲಾಗಿದೆ.
- ಅನುಮೋದಿತ ವಾರ್ಷಿಕ ಕ್ರಿಯಾ ಯೋಜನೆಯಂತೆ 2015–16ನೇ ಸಾಲಿನಲ್ಲಿ 22 ಜಿಲ್ಲೆಗಳಿಂದ 64 ತಾಲ್ಲೂಕುಗಳನ್ನು ಇಂಟೆನ್ಸೀವ್ ಕಾರ್ಯತಂತ್ರಕ್ಕೆ ಅಳವಡಿಸಲಾಗಿದ್ದು, 2016–17ನೇ ಸಾಲಿನಲ್ಲಿ 44 ತಾಲ್ಲೂಕಗಳನ್ನು ಇಂಟೆನ್ಸಿವ್ ಕಾರ್ಯತಂತ್ರಕ್ಕೆ ಅಳವಡಿಸಲಾಗುತ್ತಿದೆ. ಒಟ್ಟಾರೆಯಾಗಿ 108 ತಾಲ್ಲೂಕುಗಳಲ್ಲಿ ಇಂಟೆನ್ಸೀವ್ ಕಾರ್ಯತಂತ್ರವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದರಿಂದಾಗಿ ಯೋಜನೆಗಳ ಅನುಷ್ಠಾನವನ್ನು ಬೃಹತ್ ಪ್ರಮಾಣದಲ್ಲಿ ವಿಸ್ತರಿಸಿದಂತಾಗಿದೆ.
- 2016–17ನೇ ಸಾಲಿನ ಅಂತ್ಯಕ್ಕೆ ಸಾಮಾಜಿಕ ಕ್ರೋಢೀಕರಣದಡಿಯಲ್ಲಿ ಸುಮಾರು 271 ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳನ್ನು ರಚಿಸಲಾಗಿದ್ದು, ಸದರಿ ತಾಲ್ಲೂಕುಗಳಲ್ಲಿ 20 (ಫೆಸಿಲಿಟೇಟರ್ಸ್‌ಗಳಿರುವ) ತಾಲ್ಲೂಕುಗಳನ್ನು ಆಯ್ಕೆ ಮಾಡಿದ್ದು, ಈ ತಾಲ್ಲೂಕುಗಳಲ್ಲಿ ರಚಿಸಿರುವ ಒಕ್ಕೂಟಗಳಿಗೆ ಪ್ರಾರಂಭಿಕ ನಿಧಿ ಹಾಗೂ ಸಮುದಾಯ ಬಂಡವಾಳ ನಿಧಿಯನ್ನು ನೀಡಲು ಒಕ್ಕೂಟಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ. ಬಾಕಿ ಉಳಿದ 44 ತಾಲ್ಲೂಕುಗಳಲ್ಲಿ ಎನ್‌ಆರ್‌ಎಲ್‌ಪಿ ಜಿಲ್ಲೆಗಳಿಂದ ತಾಲ್ಲೂಕು ಮಟ್ಟದ ಸಂಪನ್ಮೂಲ ವ್ಯಕ್ತಿಗಳ ಮೂಲಕ ಒಕ್ಕೂಟಗಳಿಗೆ ತರಬೇತಿಯನ್ನು ನೀಡುವ ತಂತ್ರವನ್ನು ಅಳವಡಿಸಿಕೊಳ್ಳಲಾಗಿದೆ.
- 2016–17ನೇ ಸಾಲಿನಲ್ಲಿ ಬಾಕಿ ಉಳಿದ 92 ತಾಲ್ಲೂಕುಗಳಲ್ಲಿ ಫೆಸಿಲಿಟೇಟರ್ಸ್‌ಗಳು ಕಾರ್ಯನಿರ್ವಹಿಸುತ್ತಿರುವ 47 ತಾಲ್ಲೂಕುಗಳಲ್ಲಿ ಸಾಮಾಜಿಕ ಕ್ರೋಢೀಕರಣದಡಿಯಲ್ಲಿ ಒಕ್ಕೂಟಗಳ ರಚನೆ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.
- ಮಾನ್ಯ ಪ್ರಧಾನ ಮಂತ್ರಿಗಳ ಕಛೇರಿ ಆದೇಶದಂತೆ ಪ್ರತೀ ತಾಲ್ಲೂಕುಗಳಲ್ಲಿ 25–30 ಜನ ತಾಲ್ಲೂಕುಮಟ್ಟದ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ 13 ದಿನಗಳ ಸಾಮಾನ್ಯ ಹಾಗೂ ವಿಷಯಾಧರಿತ ತರಬೇತಿಯನ್ನು ನೀಡಲಾಗುತ್ತಿದೆ. ಪ್ರಸ್ತುತ 2016–17ನೇ ಸಾಲಿನಲ್ಲಿ 20 ತಾಲ್ಲೂಕುಗಳಲ್ಲಿ 482 ಜನ ತಾಲ್ಲೂಕುಮಟ್ಟದ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿಯನ್ನು

ನೀಡಲಾಗಿದ್ದು, ಸದರಿಯವರುಗಳನ್ನು ಸಂಜೀವಿನಿ ಯೋಜನೆಯ ಕಾರ್ಯಕ್ರಮ ಅನುಷ್ಠಾನಗಳಲ್ಲಿ, ವಿವಿಧ ರೀತಿಯ ತರಬೇತಿಗಳನ್ನು ನೀಡುವಲ್ಲಿ ಹಾಗೂ ಇತರೆ ಇಲಾಖೆಗಳ ರಾಷ್ಟ್ರ/ರಾಜ್ಯ ಸರ್ಕಾರಗಳ ಕಾರ್ಯಕ್ರಮಗಳನ್ನು ಸ್ವ ಸಹಾಯ ಗುಂಪುಗಳ ಸದಸ್ಯರಿಗೆ ತಲುಪಿಸುವುದರಲ್ಲಿ ಬಳಸಿಕೊಳ್ಳಲಾಗುತ್ತಿದೆ.

- ಎನ್‌ಆರ್‌ಎಲ್‌ಪಿ ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳ ಹಾಗೂ ಪ್ರಮುಖ ಪುಸ್ತಕ ಬರಹಗಾರರ ಗೌರವಧನವನ್ನು ನೇರವಾಗಿ ಒಕ್ಕೂಟಗಳ ಖಾತೆಗೆ ಬಿಡುಗಡೆ ಮಾಡಲಾಗಿರುತ್ತದೆ.

**ಇಂಟೆನ್ಸೀವ್ ತಾಲ್ಲೂಕುಗಳಲ್ಲಿನ ಸಾಂಸ್ಥಿಕ ಬಲವರ್ಧನೆ ಮತ್ತು ಸಾಮರ್ಥ್ಯ ಬಲವರ್ಧನೆಯ ಪ್ರಗತಿ**

| ಕ್ರ. ಸಂ | ಘಟಕಗಳು | 2016–17 | |
|---|---|---|---|
| | | ಗುರಿ | ಸಾಧನೆ |
| 1 | ಇಂಟೆನ್ಸೀವ್ ಕಾರ್ಯತಂತ್ರವನ್ನು ಅನುಷ್ಠಾನಗೊಳಿಸುತ್ತಿರುವ ಜಿಲ್ಲೆಗಳ ಸಂಖ್ಯೆ | 5 | 0 |
| 2 | ಇಂಟೆನ್ಸೀವ್ ಕಾರ್ಯತಂತ್ರವನ್ನು ಅನುಷ್ಠಾನಗೊಳಿಸುತ್ತಿರುವ ತಾಲ್ಲೂಕುಗಳ ಸಂಖ್ಯೆ | 92 | 47 |
| 3 | ಇಂಟೆನ್ಸೀವ್ ಕಾರ್ಯತಂತ್ರವನ್ನು ಪ್ರಾರಂಭಿಸಲಾಗುವ ಗ್ರಾಮ ಪಂಚಾಯತ್‌ಗಳ ಸಂಖ್ಯೆ | 252 | 109 |
| 4 | ಇಂಟೆನ್ಸೀವ್ ಕಾರ್ಯತಂತ್ರವನ್ನು ಪ್ರಾರಂಭಿಸಲಾಗುವ ಗ್ರಾಮಗಳ ಸಂಖ್ಯೆ | 1250 | 367 |
| 5 | ಉತ್ತೇಜಿಸಲಾದ ಹೊಸ ಸ್ವ ಸಹಾಯ ಗುಂಪುಗಳ ಸಂಖ್ಯೆ | 2200 | 1396 |
| 6 | ಎನ್‌ಆರ್‌ಎಲ್‌ಎಂ ವ್ಯಾಪ್ತಿಗೆ ತಂದ ಇತರೆ ಸ್ವ ಸಹಾಯ ಗುಂಪುಗಳ ಸಂಖ್ಯೆ | 17250 | 2480 |
| 7 | ಇಂಟೆನ್ಸೀವ್ ತಾಲ್ಲೂಕುಗಳಲ್ಲಿ ಎನ್‌ಆರ್‌ಎಲ್‌ಎಂ ವ್ಯಾಪ್ತಿಯಲ್ಲಿರುವ ಸ್ವ ಸಹಾಯ ಗುಂಪುಗಳ ಸಂಖ್ಯೆ | 19450 | 3876 |
| 8 | ಮೂಲ ತರಬೇತಿ ನೀಡಿದ ಸ್ವ ಸಹಾಯ ಗುಂಪುಗಳ ಸಂಖ್ಯೆ | 9620 | 4851 |
| 9 | ಗುಣಮಟ್ಟ ಪುಸ್ತಕ ನಿರ್ವಹಣೆಯ ಅಭ್ಯಾಸಗಳನ್ನು ಪರಿಚಯಿಸಲಾದ ಸ್ವ ಸಹಾಯ ಗುಂಪಗಳ ಸಂಖ್ಯೆ | 0 | 2118 |
| 10 | ನಿಯೋಜಿಸಲಾದ ಸ್ವ ಸಹಾಯ ಗುಂಪುಗಳ ಪುಸ್ತಕ ನಿರ್ವಾಹಕರುಗಳ ಸಂಖ್ಯೆ | 17505 | 3212 |
| 11 | ನಿಯೋಜಿಸಲಾದ ಮುಖ್ಯ ಪುಸ್ತಕ ನಿರ್ವಾಹಕರುಗಳ ಸಂಖ್ಯೆ | | 610 |
| 12 | ಪಂಚಸೂತ್ರವನ್ನು ಅನುಸರಿಸುತ್ತಿರುವ ಸ್ವ ಸಹಾಯ ಗುಂಪುಗಳ ಸಂಖ್ಯೆ | 17505 | 3376 |
| 13 | ಇಂಟೆನ್ಸೀವ್ ತಾಲ್ಲೂಕುಗಳಲ್ಲಿ ತರಬೇತಿ ಪಡೆದ ಆಂತರಿಕ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಸಂಖ್ಯೆ (ಮುಖ್ಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳು) | 176 | 1224 |
| 14 | ರಚಿಸಲಾದ ವಾರ್ಡ್ ಮಟ್ಟದ ಒಕ್ಕೂಟಗಳ ಸಂಖ್ಯೆ | 1250 | 267 |
| 15 | ವಾರ್ಡ್ ಮಟ್ಟದ ಒಕ್ಕೂಟಗಳಲ್ಲಿ ಸದಸ್ಯತ್ವ ಹೊಂದಿರುವ ಸ್ವಸಹಾಯ ಗುಂಪುಗಳ ಸಂಖ್ಯೆ | 11250 | 2779 |
| 16 | ತರಬೇತಿ ನೀಡಲಾದ ವಾರ್ಡ್ ಮಟ್ಟದ ಒಕ್ಕೂಟಗಳ ಸಂಖ್ಯೆ | 2875 | 4024 |
| 17 | ರಚಿಸಲಾದ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ಸಂಖ್ಯೆ | 250 | 96 |
| 18 | ಆರಂಭಿಕ ನಿಧಿ ನೀಡಲಾದ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ಸಂಖ್ಯೆ | 960 | 610 |
| 19 | ವಾರ್ಡ್ ಮಟ್ಟದ ಒಕ್ಕೂಟಗಳ EC ತರಬೇತಿಗಳ ಸಂಖ್ಯೆ | 2500 | 2099 |
| 20 | ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ EC ತರಬೇತಿಗಳ ಸಂಖ್ಯೆ | 610 | 610 |
| 21 | ಪೂರ್ಣಗೊಳಿಸಿರುವ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ತರಬೇತಿ ಸುತ್ತುಗಳ ಸಂಖ್ಯೆ | 252 | 271 |
| 22 | ಇಂಟೆನ್ಸೀವ್ ತಾಲ್ಲೂಕುಗಳಲ್ಲಿ ತರಬೇತಿ ನೀಡಲಾದ ಆಂತರಿಕ ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಸಂಖ್ಯೆ | 1924 | 1224 |
| 23 | ಇಂಟೆನ್ಸೀವ್ ತಾಲ್ಲೂಕುಗಳಲ್ಲಿ ತರಬೇತಿ ನೀಡಲಾದ ತಾಲ್ಲೂಕ ಮಟ್ಟದ ಸಂಪನ್ಮೂಲ ವ್ಯಕ್ತಿಗಳ ಸಂಖ್ಯೆ | 500 | 466 |

**ಪಂಚಾಯತ್ ರಾಜ್ ಸಂಸ್ಥೆ ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳ ಅಭಿಗಮನ :**

ಪಂಚಾಯತ್ ರಾಜ್ ಸಂಸ್ಥೆ ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳ ಒಗ್ಗೂಡಿಸುವಿಕೆ ಯೋಜನೆಯು ತುಮಕೂರು ಜಿಲ್ಲೆಯ ಗುಬ್ಬಿ ಮತ್ತು ಪಾವಗಡ, ಕೊಪ್ಪಳ ಜಿಲ್ಲೆಯ ಕೊಪ್ಪಳ ಹಾಗೂ ಗಂಗಾವತಿ ತಾಲ್ಲೂಕುಗಳಲ್ಲಿ ಕುಡುಂಬಶ್ರೀ ಸಹಭಾಗಿತ್ವದಲ್ಲಿ ಅನುಷ್ಠಾನಗೊಳ್ಳುತ್ತಿದೆ. ಕುಡುಂಬಶ್ರೀ ಯೋಜನೆಯ ಒಕ್ಕೂಟಗಳಲ್ಲಿ ಕೆಲಸ ನಿರ್ವಹಿಸಿ ಅನುಭವವುಳ್ಳ 15 ಮಾರ್ಗದರ್ಶಕರು ಈ ಜಿಲ್ಲೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಪ್ರತಿ ಪ್ರಾಯೋಗಿಕ ಗ್ರಾಮ ಪಂಚಾಯಿತಿಗಳಲ್ಲಿ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ ತರಬೇತಿ ನೀಡಿದ್ದು, ಹಾಲಿ 200 ಸಂಪನ್ಮೂಲ ವ್ಯಕ್ತಿಗಳು ಒಗ್ಗೂಡಿಸುವಿಕೆ ಕಾರ್ಯಕ್ರಮ ಯಶಸ್ವಿಗೆ ಕೆಲಸ ನಿರ್ವಹಿಸುತ್ತಿದ್ದಾರೆ.

ಗ್ರಾಮ ಸಭಾದಲ್ಲಿ ಜನರು ಭಾಗವಹಿಸುವಂತೆ ಮಾಡುವುದು ನಿರಂತರ ಪ್ರಕ್ರಿಯೆಯಾಗಿದ್ದು, ಒಕ್ಕೂಟದ ಪದಾಧಿಕಾರಿಗಳು ಮತ್ತು ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳ ಮೂಲಕ ಗ್ರಾಮ ಸಭಾದಲ್ಲಿ ಹೆಚ್ಚು ಮಹಿಳೆಯರು ಭಾಗವಹಿಸುವಂತೆ ಮಾಡಲಾಗುತ್ತದೆ.

ಜನರ ಸಹಭಾಗಿತ್ವದಲ್ಲಿ ಸಂದಾಯ ಅರ್ಹ ಕಾರ್ಯಕ್ರಮಗಳ ವಿಶ್ಲೇಷಣೆ ಮಾಡುತ್ತಿದ್ದು, "ಹಕ್ಕಿಗಾಗಿ ದಾಪುಗಾಲು" ಕಾರ್ಯಕ್ರಮದ ಕುರಿತು ಎಲ್ಲಾ ಮಾರ್ಗದರ್ಶಕರಿಗೂ ತರಬೇತಿ ನೀಡಿದ್ದು, ತರಬೇತಿ ಕೈಪಿಡಿ ತಯಾರಿಸಿ ನೀಡಲಾಗಿದೆ. ಈ ಕಾರ್ಯಕ್ರಮವನ್ನು ಕೊಪ್ಪಳದ ಅಗಲಕೇರೆ ಪಂಚಾಯಿತಿಯಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನ ಮಾಡಲಾಗಿದೆ.

ಪಿಎಇಯ ಮುಖ್ಯ ಉದ್ದೇಶವೆಂದರೆ ಸಂದಾಯ ಅರ್ಹ ಕಾರ್ಯಕ್ರಮಗಳ ಕುರಿತು ಮಹಿಳೆಯರನ್ನು ಪ್ರೇರೇಪಿಸಿ ಒಗ್ಗೂಡಿಸಿ, ಸರ್ಕಾರದ ಕಾರ್ಯಕ್ರಮಗಳನ್ನು ಪಡೆಯುವಂತೆ ಮಾಡುವುದರ ಜೊತೆ ಸಮುದಾಯಾಧಾರಿತ ಸಂಘಗಳಿಂದ ಮೂಲ ಮಾಹಿತಿ ಸಂಗ್ರಹಿಸುವುದಾಗಿದೆ. ಈ ಮೂಲ ಮಾಹಿತಿ ಆಧರಿಸಿ ಗುಂಪಿನ ಸದಸ್ಯರು ಗ್ರಾಮ ಪಂಚಾಯಿತಿ ಮತ್ತು ಇಲಾಖೆಗಳಿಂದ ಕಾರ್ಯಕ್ರಮ ಪಡೆಯುವಂತೆ ಸಾಮರ್ಥ್ಯ ಅಭಿವೃದ್ಧಿಪಡಿಸುವುದಾಗಿದೆ.

**ಕರ್ನಾಟಕದಲ್ಲಿ ಪಿ.ಎ.ಇ ಪ್ರಗತಿ**

| ಕ್ರ.ಸಂ | ತಾಲ್ಲೂಕು | ಒಟ್ಟು ಸ್ವಸಹಾಯ ಗುಂಪು | ಪಿಎಇ ಮುಗಿದಿರುವುದು |
|---|---|---|---|
| 1 | ಕೊಪ್ಪಳ | 368 | 368 |
| 2 | ಗಂಗಾವತಿ | 286 | 262 |
| 3 | ಪಾವಗಡ | 471 | 458 |
| 4 | ಗುಬ್ಬಿ | 379 | 345 |

ಪಿ.ಎ.ಇ ಮಾಡಿದ ಪರಿಣಾಮ ನಿಷ್ಕ್ರಿಯಗೊಂಡ 40 ಸ್ವಸಹಾಯ ಗುಂಪುಗಳನ್ನು ಗುರುತಿಸಿದ್ದು, ಸಂಜೀವಿನಿ ಒಕ್ಕೂಟಗಳಲ್ಲಿ ನೊಂದಾಯಿಸಲಾಗಿದೆ, ಹಾಗೂ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳ ಸಹಕಾರದಿಂದ ಹೊಸ ಸ್ವಸಹಾಯ ಗುಂಪು ರಚನೆ ಮಾಡಲು ಕ್ರಮವಹಿಸಿದೆ.

ಸಹಭಾಗಿತ್ವದೊಂದಿಗೆ ಸಂದಾಯ ಅರ್ಹ ಕಾರ್ಯಕ್ರಮ ವಿಶ್ಲೇಷಣೆ ಮಾಡಿದ ನಂತರ ಸಂದಾಯ ಅರ್ಹ ಕಾರ್ಯಕ್ರಮ ಪಡೆಯಲು, ವಾರ್ಡ್ ಮಟ್ಟದ ಒಕ್ಕೂಟಗಳ ಮೂಲಕ ಜೂನ್ ನಿಂದ ಸೆಪ್ಟೆಂಬರ್ – 2016 ರವರೆಗೆ ಕಾರ್ಯ ಯೋಜನೆ ತಯಾರಿಸಲಾಯಿತು. ಇದರ ಜೊತೆ ಜೊತೆಯಲ್ಲಿ ಸಂಘದ ಎಲ್ಲಾ ಸದಸ್ಯರಿಗೂ ಸಂದಾಯ ಅರ್ಹ ಕಾರ್ಯಕ್ರಮದ ಕುರಿತು ಪ್ರೇರೇಪಿಸುವುದರ ಜೊತೆ ಪ್ರತಿ ಕುಟುಂಬದ ಆಯವ್ಯಯ ತಯಾರಿಸಲಾಯಿತು.

**ಯೋಜನೆ ತಯಾರಿಕೆಯ ಪ್ರಗತಿ**

| ಕ್ರ.ಸಂ | ತಾಲ್ಲೂಕು | ಒಟ್ಟು ಸ್ವಸಹಾಯ ಗುಂಪು | ಪಿಎಇ ಮುಗಿದಿರುವುದು |
|---|---|---|---|
| 1 | ಕೊಪ್ಪಳ | 43 | 42 |
| 2 | ಗಂಗಾವತಿ | 54 | 42 |
| 3 | ಪಾವಗಡ | 56 | 39 |
| 4 | ಗುಬ್ಬಿ | 82 | 47 |

ಈ ಯೋಜನೆ ತಯಾರಿಸಿದ ಪರಿಣಾಮ ಕೊಪ್ಪಳ ಜಿಲ್ಲೆ ಹಾಗೂ ತುಮಕೂರು ಜಿಲ್ಲೆಯ ಹಳ್ಳಿಗಳಲ್ಲಿ ಉದ್ಯೋಗ ಖಾತರಿ ಯೋಜನೆಯ ಜಾಬ್ ಕಾರ್ಡ್ ಪಡೆಯಲು ಅರ್ಜಿ ಹಾಗೂ ಉದ್ಯೋಗಕ್ಕೆ ಬೇಡಿಕೆ ಸಲ್ಲಿಸುವ ಶಿಬಿರಗಳನ್ನು ಏರ್ಪಡಿಸಲಾಯಿತು. ಕೊಪ್ಪಳ ತಾಲ್ಲೂಕಿನಲ್ಲಿ 375 ಜಾಬ್ ಕಾರ್ಡ್‌ಗೆ ಅರ್ಜಿಗಳು ಮತ್ತು 120 ಕೆಲಸದ ಬೇಡಿಕೆಗೆ ಅರ್ಜಿಗಳು ಗಂಗಾವತಿ ತಾಲ್ಲೂಕಿನಲ್ಲಿ 75 ಜಾಬ್ ಕಾರ್ಡ್‌ಗೆ ಅರ್ಜಿಗಳು 76 ಉದ್ಯೋಗ ಬೇಡಿಕೆ ಅರ್ಜಿಗಳು, ಪಾವಗಡದಲ್ಲಿ 400 ಜಾಬ್‌ಕಾರ್ಡ್ & ಉದ್ಯೋಗ ಬೇಡಿಕೆ ಅರ್ಜಿಗಳು, ಗುಬ್ಬಿ ತಾಲ್ಲೂಕಿನಿಂದ 250 ಜಾಬ್‌ಕಾರ್ಡ್ & ಉದ್ಯೋಗ ಬೇಡಿಕೆಗೆ ಸಂಬಂಧಿಸಿದ ಅರ್ಜಿಗಳು ಸಲ್ಲಿಕೆಯಾದವು.

ಸಹಭಾಗಿತ್ವದ ಸಂದಾಯ ಅರ್ಹ ಕಾರ್ಯಕ್ರಮ ವಿಶ್ಲೇಷಣೆ ಹಾಗೂ ಸಂದಾಯ ಅರ್ಹ ಕಾರ್ಯಕ್ರಮಗಳ ಯೋಜನೆ ತಯಾರಿ ಜೊತೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಬಡತನ ತೀವ್ರತೆ ಕಡಿಮೆಗೊಳಿಸುವ ಯೋಜನೆ ತಯಾರಿಕೆಯನ್ನು ಆರಂಭಿಸಲಾಯಿತು. ಈ ಚಟುವಟಿಕೆಯಿಂದ ಪ್ರತಿ ಗ್ರಾಮದ ಸಮಗ್ರ ಅಭಿವೃದ್ಧಿಗೆ ಸ್ಥಳೀಯ ಮಟ್ಟದಲ್ಲಿ ಜೀವನೋಪಾಯ, ಆರೋಗ್ಯ, ಶಿಕ್ಷಣಕ್ಕೆ ಸಂಬಂಧಿಸಿದಂತೆ, ಪ್ರತಿ ಸ್ವಸಹಾಯ ಗುಂಪಿನ ಸದಸ್ಯರು ಸೇರಿ ಗ್ರಾಮದಲ್ಲಿ ಗುಣಮಟ್ಟದ ಸಮಗ್ರ ಅಭಿವೃದ್ಧಿಗೆ ಯೋಜನೆ ತಯಾರಿಸಿ ಗ್ರಾಮ ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳು ಇವುಗಳ ಕುರಿತು ಕ್ರಮವಹಿಸಲು ಈ ಯೋಜನೆ ಸಹಕಾರಿಯಾಗುತ್ತದೆ.

ಈ ಯೋಜನೆ ತಯಾರಿಕೆಗೆ ಪೂರ್ವಭಾವಿಯಾಗಿ ಎಲ್ಲಾ ಕುಡುಂಬಶ್ರೀ ಮಾರ್ಗದರ್ಶಕರಿಗೆ 5 ದಿನಗಳ ತರಬೇತಿ ನೀಡಲಾಯಿತು. ಕೊಪ್ಪಳ ಜಿಲ್ಲೆಯ 4 ಪಂಚಾಯಿತಿಯ ವಾರ್ಡ್ ಒಕ್ಕೂಟದ ಪ್ರತಿನಿಧಿಗಳಿಗೆ ಹಾಗೂ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳಿಗೆ ಗಂಗಾವತಿ, ಗುಬ್ಬಿ, ಪಾವಗಡದಲ್ಲಿ ತರಬೇತಿಯನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಯೋಜನೆ ತಯಾರಿಸುವ ಕುರಿತು ನೀಡಲಾಯಿತು.

GP2RP SHG ಹಂತದ ಕ್ರಿಯಾ ಯೋಜನೆ ಸಿದ್ಧಪಡಿಸುವಿಕೆಯು ಕೊಪ್ಪಳ ತಾಲ್ಲೂಕಿನ 4 ಗ್ರಾಮ ಪಂಚಾಯಿತಿಗಳು ಮತ್ತು ಗುಬ್ಬಿ ತಾಲ್ಲೂಕಿನ 4 ಗ್ರಾಮ ಪಂಚಾಯಿತಿಗಳಲ್ಲಿ ಮುಗಿಸಿ ಅಕ್ಟೋಬರ್ 02 ರ ವಿಶೇಷ ಗ್ರಾಮಸಭೆಗೆ ಅನುಮೋದನೆಗೆ ಸಲ್ಲಿಸಲಾಗಿದೆ. ಈ ತಾಲ್ಲೂಕುಗಳ ತಲಾ 3 ಗ್ರಾಮ ಪಂಚಾಯಿತಿಗಳಲ್ಲಿ GP2RP ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು ಮತ್ತು ಮೆಂಟರ್ಸ್ ಸ್ವಸಹಾಯ ಗುಂಪುಗಳ ವಾರ್ಡ್ ಮತ್ತು ಗ್ರಾಮ ಪಂಚಾಯಿತಿ ಒಕ್ಕೂಟಗಳ ಸಾಮರ್ಥ್ಯ ಬಲವರ್ಧನೆಗೆ ಸಹಕಾರ ಕೊಡುತ್ತಿದ್ದು ಪುಸ್ತಕ ನಿರ್ವಹಣೆ, ಸಭೆಯ ನೀತಿ–ನಿಯಮಗಳು ಮುಂತಾದ ಸ್ವಸಹಾಯ ಸಂಘದ ಕರ್ತವ್ಯಗಳ ಬಗ್ಗೆ ಅರಿವನ್ನು ಮೂಡಿಸಲಾಯಿತು.

ಗಂಗಾವತಿ ಮತ್ತು ಗುಬ್ಬಿ ತಾಲ್ಲೂಕುಗಳು ನಾನ್ ಇಂಟೆನ್ಸೀವ್ ತಾಲ್ಲೂಕುಗಳಾಗಿದ್ದು, ಇಲ್ಲಿ ಸ್ವಸಹಾಯ ಗುಂಪುಗಳ ವಾರ್ಡ್ ಮತ್ತು ಗ್ರಾಮ ಪಂಚಾಯಿತಿ ಒಕ್ಕೂಟಗಳು ರಚನೆಯಾಗಿರುವುದಿಲ್ಲ. ಆದರೂ ಪಂಚಾಯತ್ ರಾಜ್ ಸಂಸ್ಥೆ ಮತ್ತು ಸಮುದಾಯಾಧಾರಿತ ಸಂಸ್ಥೆಗಳ ಅಭಿಗಮನದ ಕಾರ್ಯಕ್ರಮದಲ್ಲಿ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು ಮತ್ತು ಮೆಂಟರ್ಸ್ ಸೇರಿ ತಾತ್ಕಾಲಿಕ ವಾರ್ಡ್ ಒಕ್ಕೂಟಗಳನ್ನು ರಚಿಸಿದ್ದು, ಈ ಒಕ್ಕೂಟಗಳ ವತಿಯಿಂದ ಬಾಲಸಭೆಯನ್ನು ರಚಿಸಿ ಪರಿಸರ ಜಾಗೃತಿ ಕಾರ್ಯಕ್ರಮಗಳು, ವೈದ್ಯಕೀಯ ಚಿಕಿತ್ಸಾ ಶಿಬಿರಗಳು ಮುಂತಾದ ಸಮಾಜಮುಖಿ ಕಾರ್ಯಕ್ರಮಗಳನ್ನು ಈ 10 ಗ್ರಾಮಪಂಚಾಯಿತಿಗಳಲ್ಲಿ ಹಮ್ಮಿಕೊಳ್ಳಲಾಗಿರುತ್ತದೆ.

ಗ್ರಾಮ ಪಂಚಾಯಿತಿ ಸಮನ್ವಯ ಸಮಿತಿಯು ಸಮುದಾಯಾಧಾರಿತ ಸಂಸ್ಥೆಗೆ ಮತ್ತು ಪಂಚಾಯತ್ ರಾಜ್ ಸಂಸ್ಥೆ ಪರಸ್ಪರ ಸಹಭಾಗಿತ್ವದೊಂದಿಗೆ ಚರ್ಚಿಸಲು ಔಪಚಾರಿಕವಾಗಿ ವೇದಿಕೆ ನಿರ್ಮಿಸಿದಂತಾಗುತ್ತದೆ. ಅಲ್ಲದೆ ಪಂಚಾಯತ್ ರಾಜ್ ಸಂಸ್ಥೆಯು ಕೈಗೊಳ್ಳುವ ಕೆಲಸ–ಕಾಮಗಾರಿಗಳಲ್ಲಿ ಸಹಾಯಕವಾಗುವುದರೊಂದಿಗೆ ನಿರಂತರ ಮೌಲ್ಯಮಾಪನ ಮತ್ತು ಉಸ್ತುವಾರಿ ಕೈಗೊಳ್ಳಲು ಕೂಡ ಅನುವಾಗುತ್ತದೆ.

ಮೊದಲ ಗ್ರಾಮ ಪಂಚಾಯಿತಿ ಸಮನ್ವಯ ಸಮಿತಿಯ ಸಭೆಯು ಕೊಪ್ಪಳ ಮತ್ತು ಪಾವಗಡ ತಾಲ್ಲೂಕಿನ 10 ಗ್ರಾಮ ಪಂಚಾಯಿತಿಗಳಲ್ಲಿ ಚುನಾಯಿತ ಪ್ರತಿನಿಧಿಗಳು, ಸಮುದಾಯಾಧಾರಿತ ಸಂಸ್ಥೆಗಳ ಪ್ರತಿನಿಧಿಗಳು, ತಾಲ್ಲೂಕುಮಟ್ಟದ ಸಹ ಇಲಾಖೆಗಳ ಅಧಿಕಾರಿಗಳ ಸಮ್ಮುಖದಲ್ಲಿ ಈಗಾಗಲೇ ಕೈಗೊಳ್ಳಲಾಗಿದೆ. ಪಾವಗಡದಲ್ಲಿ ಗ್ರಾಮ ಪಂಚಾಯಿತಿ ಸಮನ್ವಯ ಸಮಿತಿಯ ಸದಸ್ಯರಿಗೆ ವಿಶೇಷ ತರಬೇತಿಯನ್ನು ನೀಡಲಾಗಿದೆ. ಕೊಪ್ಪಳದ 7 ಪಂಚಾಯತಿಗಳಲ್ಲಿ, ಗಂಗಾವತಿಯ 6 ಪಂಚಾಯತಿಗಳಲ್ಲಿ ಹಾಗೂ ಗುಬ್ಬಿಯ 7 ಪಂಚಾಯತಿಗಳಲ್ಲಿ ಗ್ರಾಮ ಪಂಚಾಯಿತಿ ಸಮನ್ವಯ ಸಮಿತಿಯನ್ನು ರಚಿಸಲಾಗಿದೆ.

ಕರ್ನಾಟಕದ ಪಂಚಾಯತ್ ರಾಜ್ ಸಂಸ್ಥೆ ಮತ್ತು ಸಮುದಾಯಾಧಾರಿತ ಸಂಸ್ಥೆಗಳ ಅಭಿಗಮನ ಕಾರ್ಯಕ್ರಮದಲ್ಲಿ ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ಬಾಲಸಭೆಯನ್ನು ಆರಂಭಿಸಲಾಗಿದೆ. ಬಾಲ ಸಭೆ ಎಂಬುದು ಮಕ್ಕಳಿಗೋಸ್ಕರ ಇರುವ ಸಮಿತಿಯಾಗಿದ್ದು, ಒಕ್ಕೂಟ ವ್ಯಾಪ್ತಿಯಲ್ಲಿನ ಅರ್ಹ 6–18 ವರ್ಷದವರಾಗಿರುವ ಎಲ್ಲಾ ಮಕ್ಕಳು ಕೂಡ ಸಮಿತಿಯಲ್ಲಿರುತ್ತಾರೆ. ಒಂದು ಬಾಲಸಭೆಯಲ್ಲಿ ಸುಮಾರು 10 ರಿಂದ 20 ಮಕ್ಕಳಿದ್ದು, ಈ ಬಾಲಸಭೆಗಳ ಉಸ್ತುವಾರಿಯನ್ನು ಸ್ವಸಹಾಯ ಗುಂಪು ಮತ್ತು ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು ನೋಡಿಕೊಳ್ಳಬೇಕಾಗುತ್ತದೆ. ಬಾಲಸಭೆಗಳು ತಮಗೆ ಅನುಕೂಲವಾಗುವಂತೆ ವಾರಕ್ಕೊಮ್ಮೆ ಹಾಗೂ ತಿಂಗಳಿಗೊಮ್ಮೆ ಸಭೆ ನಡೆಸಬೇಕಾಗಿರುತ್ತದೆ. ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಹಾಗಲವಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಈಗಾಗಲೇ ರಚನೆಯಾಗಿರುವ ಬಾಲಸಭೆಯಾದ ನವಪೀಲಿಕಾ ಸಮಿತಿಯು ಪರಿಸರ ದಿನಾಚರಣೆಯನ್ನು ದಿನಾಂಕ 24.04.2016 ರಂದು ಹಮ್ಮಿಕೊಂಡಿದ್ದು ಇದರಲ್ಲಿ ಸ್ವಸಹಾಯ ಗುಂಪಿನ ಸದಸ್ಯರೊಂದಿಗೆ ಜಾಗೃತಿ ಜಾಥ ಸಹ ಕೈಗೊಂಡಿದ್ದಾರೆ. ಈ ಬಾಲಸಭೆಯು ಸಾರ್ವಜನಿಕರಲ್ಲಿ ಸ್ವಚ್ಚತೆ, ಶೌಚಾಲಯ ಮತ್ತು ನೈರ್ಮಲ್ಯ ಕುರಿತಂತೆ ಅರಿವನ್ನು ಮೂಡಿಸುತ್ತಿದ್ದಾರೆ. ಅದೇ ರೀತಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಸಿದ್ದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಾಲಸಭೆಯು ವೈದ್ಯಕೀಯ ಚಿಕಿತ್ಸಾ ಶಿಬಿರವನ್ನು ಆಯೋಜಿಸಿದ್ದು ಆರೋಗ್ಯದ ಕುರಿತ ವಿವಿಧ ಸೌಲಭ್ಯಗಳು ಮತ್ತು ಕೆಲವು ಕ್ರಮಗಳ ಬಗ್ಗೆ ತಿಳಿಸಿಕೊಡುತ್ತಿದ್ದಾರೆ.

ಶಾಲೆ ಬಿಟ್ಟಂತಹ ಕೆಲವು ಮಕ್ಕಳನ್ನು ಬಾಲಸಭೆಯಲ್ಲಿ ಗುರುತಿಸಿ ಮರಳಿ ಶಾಲೆಗೆ ದಾಖಲಿಸಲಾಗುತ್ತದೆ.

**ಬಾಲಸಭೆಗಳ ಸಂಖ್ಯೆ**

| ಕ್ರ.ಸಂ | ತಾಲ್ಲೂಕು | ಬಾಲಸಭೆಗಳ ಸಂಖ್ಯೆ |
|---|---|---|
| 1 | ಪಾವಗಡ | 28 |
| 2 | ಗುಬ್ಬಿ | 80 |
| 3 | ಕೊಪ್ಪಳ | 32 |
| 4 | ಗಂಗಾವತಿ | 48 |

ಲಿಂಗತ್ವ ಸ್ವಯಂ ಕಲಿಕೆ ಕಾರ್ಯಕ್ರಮ **(GSLP)** ಮಹಿಳೆಯರಿಗೆ ಸಹಕಾರವಾಗುವಂತಹ ಹಾಗೂ ತಮಗೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಕಂಡುಕೊಳ್ಳಲು ಇರುವ ಯೋಜನೆ ಇದಾಗಿದ್ದು, ಈ ಕಾರ್ಯಕ್ರಮದ ಪ್ರಮುಖ ಉದ್ದೇಶಗಳೆಂದರೆ.

1. ಮಹಿಳೆಯ ತನ್ನ ಸುತ್ತಮುತ್ತಲಿನ ಪರಿಸ್ಥಿತಿಯ ಕುರಿತಂತೆ ಹಾಗೂ ಸಮಾನತೆ, ನ್ಯಾಯ ಇವುಗಳ ಅರ್ಥೈಸುವಿಕೆಯೊಂದಿಗೆ ಆತ್ಮ ಸಾಕ್ಷಾತ್ಕಾರ ಕಂಡುಕೊಳ್ಳುವಂತೆ ಮಾಡುವುದು
2. ಸ್ಥಳೀಯ ಅಭಿವೃದ್ಧಿ ಕಾರ್ಯಗಳಲ್ಲಿ ಮಹಿಳೆಯರು ಹೆಚ್ಚು ಪಾಲ್ಗೊಳ್ಳುವಂತೆ ಮಾಡುವುದು
3. ಮಹಿಳೆಯರು ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶ ಕಲ್ಪಿಸುವುದರೊಂದಿಗೆ ಆಸ್ತಿಗಳ ಮೇಲೆ ನಿಯಂತ್ರಣ ಸಾಧಿಸುವುದು

4. ಮಹಿಳೆಯರು ದೌರ್ಜನ್ಯ–ನಿಂದನೆಗಳ ವಿರುದ್ಧ ಸರಿಯಾದ ಮಾಹಿತಿಯೊಂದಿಗೆ ಹೋರಾಡಲು ಸಜ್ಜುಗೊಳಿಸುವುದು.

ಈಗಾಗಲೇ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಆಯ್ಕೆಯಾಗಿರುವ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳಲ್ಲಿ ತಾಲ್ಲೂಕು ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡುವುದು ಕರ್ನಾಟಕ ರಾಜ್ಯದ ಲಿಂಗತ್ವ ಸ್ವಯಂ ಕಲಿಕೆ ಕಾರ್ಯಕ್ರಮ **(GSLP)** ದ ಮೊದಲ ಹೆಜ್ಜೆಯಾಗಿದೆ. ಪ್ರತಿ ತಾಲ್ಲೂಕಿನಿಂದ 10–15 ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಒಂದು ದಿನ ಸಭೆ ಮಾಡಿ ಚರ್ಚಿಸುವುದು. ತಮ್ಮ ಸಮುದಾಯ ಅಥವಾ ಸುತ್ತಮುತ್ತಲಿನ ಪರಿಸರದಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಿ ಪಟ್ಟಿ ಮಾಡುವುದು.

**ಸಾಧನೆಗಳು:–**

- ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರ ಸೌಲಭ್ಯಗಳು ಮತ್ತು ಸಮಸ್ಯೆಗಳ ಚರ್ಚಿಸುವ ಬಗ್ಗೆ ಸಮುದಾಯದ ಮಟ್ಟದ ಒಂದು ವೇದಿಕೆ ಸೃಜಿಸುವುದು
- ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದು
- ಸ್ವಸಹಾಯ ಸಂಘದ ಮಹಿಳೆಯರು ತಮ್ಮ ಸೌಲಭ್ಯಗಳು ಮತ್ತು ಸಮಸ್ಯೆಗಳ ಚರ್ಚಿಸಲು ಮುಂದಾಗುವಂತೆ ಮಾಡುವುದು
- ಸಮುದಾಯಾಧಾರಿತ ಸಂಸ್ಥೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ನಡುವೆ ಇರುವ ಸಮಸ್ಯೆಗಳ ಬಗ್ಗೆ ಚರ್ಚಿಸಲು ಒಂದು ಸಾಮಾನ್ಯ ವೇದಿಕೆ ರೂಪಿಸುವುದು
- ಪುಸ್ತಕ ನಿರ್ವಹಣೆ ಮಾಡಲು ಸರಿಯಾದ ವಿಧಾನಗಳನ್ನು ನಿರ್ವಹಿಸುವಂತೆ ಒಕ್ಕೂಟಗಳನ್ನು ಬಲಗೊಳಿಸುವುದು
- ಸರ್ಕಾರದ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳು ಮತ್ತು ಸೌಲಭ್ಯಗಳು ಕುರಿತು ಸಮುದಾಯದಲ್ಲಿ ಜಾಗೃತಿ ಮೂಡಿಸುವುದರೊಂದಿಗೆ ಗ್ರಾಮ ಪಂಚಾಯಿತಿಯೊಂದಿಗೆ PAE ಮೂಲಕ ಸಂಪರ್ಕ ಕಲ್ಪಿಸುತ್ತದೆ. ರಚನೆಯಾಗಿರುವ ಒಕ್ಕೂಟಗಳಲ್ಲಿ ಕಾರ್ಮಿಕ ಗುಂಪುಗಳನ್ನು ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ಅನುವು ಮಾಡಿಕೊಡಲಾಗುತ್ತದೆ.
- GP2RP ಯೋಜನೆ ಸಿದ್ದಪಡಿಸುವಿಕೆಯ ಪ್ರಕ್ರಿಯೆಯಲ್ಲಿ ಪಂಚಾಯಿತಿಯೊಂದಿಗೆ ಸಮುದಾಯಾಧಾರಿತ ಸಂಸ್ಥೆಯ ಪಾತ್ರವೂ ಸಹ ಮುಖ್ಯವಾಗುತ್ತದೆ.
- ಪ್ರತಿ ತಾಲ್ಲೂಕಿನ ಲಿಂಗತ್ವ ಸ್ವಯಂ ಕಲಿಕೆ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿದಂತಾಗುತ್ತದೆ.

**ಕರ್ನಾಟಕ ಹಾಲು ಒಕ್ಕೂಟದ ಸಹಯೋಗದೊಂದಿಗೆ ಹೈನುಗಾರಿಕೆಯ ಮೂಲಕ ಗ್ರಾಮೀಣ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮ:**

ಗ್ರಾಮೀಣ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ ಸಂಜೀವಿನಿಯು ಮೂರು ವರ್ಷಗಳ ಅವಧಿಗೆ ರಾಜ್ಯದ 30 ಜಿಲ್ಲೆಗಳಲ್ಲಿ ಹೈನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ. ಈ ಕಾರ್ಯಕ್ರಮದ ಮೂಲಕ 250 ಮಹಿಳಾ ಹಾಲು ಒಕ್ಕೂಟಗಳನ್ನು ರಚಿಸುವ, 10,000 ಫಲಾನುಭವಿಗಳನ್ನು ಮುಟ್ಟುವ ಗುರಿಯನ್ನು ಹೊಂದಿದ್ದು, ಕೆಎಮ್‌ಎಫ್ (ಕರ್ನಾಟಕ ಹಾಲು ಒಕ್ಕೂಟ) ನ್ನು ಕಾರ್ಯಕ್ರಮದ ಅನುಷ್ಠಾನ ಪಾಲುದಾರರನ್ನಾಗಿ ಮಾಡಿಕೊಂಡಿರುತ್ತದೆ.

ಕಾರ್ಯಕ್ರಮದ ಒಟ್ಟು ಮೊತ್ತವು ರೂ.17.10 ಕೋಟಿಗಳಾಗಿರುತ್ತದೆ. ಅದರಲ್ಲಿ ಸಂಜೀವಿನಿಯು ರೂ.14.85 ಕೋಟಿಗಳನ್ನು, ಯೋಜನೆಯ ಅನುಷ್ಠಾನ ಪಾಲುದಾರರಾದ ಕೆಎಮ್‌ಎಫ್ ರೂ.2.25 ಕೋಟಿಗಳನ್ನು ಭರಿಸುವುದು. ಮಾರ್ಚ್ 2017ರ ಮಾಹೆ ರವರೆಗೆ ಮೊದಲನೇ, ಎರಡನೇ ಮತ್ತು ಮೂರನೇ ಕಂತಿನ ಅನುದಾನವಾಗಿ ಸಂಜೀವಿನಿಯು ರೂ.10.66 ಕೋಟಿಗಳನ್ನು ಅನುಷ್ಠಾನ ಸಂಸ್ಥೆಯಾದ ಕೆಎಮ್‌ಎಫ್ ಸಂಸ್ಥೆಗೆ ಬಿಡುಗಡೆ ಮಾಡಿರುತ್ತದೆ.

**2016–17ನೇ ಸಾಲಿನಲ್ಲಿ ಸಾಧಿಸಲಾಗಿರುವ ಪ್ರಗತಿ**

| ಕಾರ್ಯಕ್ರಮ ಅನುಷ್ಠಾನ ಸಂಸ್ಥೆ | ಪ್ರದೇಶ | | ಆಯ್ಕೆಯಾದ ಫಲಾನುಭವಿಗಳ ವಿವರ | | ಆಯವ್ಯಯ ವಿವರ (ರೂ. ಲಕ್ಷಗಳಲ್ಲಿ) | |
|---|---|---|---|---|---|---|
| | ಜಿಲ್ಲೆ | ತಾಲ್ಲೂಕು | ಗುರಿ | ಸಾಧನೆ | ಮಂಜೂರಾಗಿರುವ ಅನುದಾನ | ಖರ್ಚು ಮಾಡಲಾಗಿರುವ ಅನುದಾನ |
| ಕೆಎಮ್‌ಎಫ್ | 26 | 56 | 2800 | 2800 | 348.39 | 331.53 |

ಪ್ರಸಕ್ತ ಆರ್ಥಿಕ ವರ್ಷ 2016–17ರಲ್ಲಿ 70 ಮಹಿಳಾ ಹಾಲು ಒಕ್ಕೂಟಗಳಿಂದ, 2,880 ಅರ್ಹ ಮಹಿಳಾ ಫಲಾನುಭವಿಗಳು ಯೋಜನೆಯ ಮೂಲಕ ಪಶು ಆರೋಗ್ಯ ಕುರಿತು ಪ್ರಾಥಮಿಕ ಅಭಿಶಿಕ್ಷಣ ತರಬೇತಿಯನ್ನು ನೀಡಲಾಗಿರುತ್ತದೆ. ಪಶು ಸಾಕಾಣಿಕೆ ಮತ್ತು ನಿರ್ವಹಣೆ ಕುರಿತು ಫಲಾನುಭವಿಗಳಿಗೆ ಸ್ಥಳೀಯ ಹಂತದಲ್ಲಿ ತರಬೇತಿ ನೀಡಬಹುದಾದ 70 ಮಹಿಳಾ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿದ್ದು, ಅವರುಗಳಿಗೆ ಪಶು ಆರೈಕೆ ಮತ್ತು ನಿರ್ವಹಣೆ ಕುರಿತು ತರಬೇತಿಯನ್ನು ನೀಡಲಾಗಿರುತ್ತದೆ. 369 ಫಲಾನುಭವಿಗಳು ರೂ.10,000 ಮೊತ್ತದ ಹಂಚಿನ ನಿಧಿಯ ಮತ್ತು ಬ್ಯಾಂಕ್ ಸಾಲದ ಸೌಲಭ್ಯದೊಂದಿಗೆ ಕರಾವಿನ ಹಸುವನ್ನು ಕೊಂಡುಕೊಂಡಿರುತ್ತಾರೆ. ಈವರೆಗೆ 136 ಸ್ವ ಸಹಾಯ ಗುಂಪುಗಳನ್ನು ಗ್ರಾಮೀಣ ಮಟ್ಟದಲ್ಲಿ ಗುರುತಿಸಲಾಗಿದ್ದು, ಉಳಿತಾಯ ಮೊತ್ತವು ರೂ. 9.91 ಲಕ್ಷಗಳಾಗಿರುತ್ತದೆ ಹಾಗೂ ಸದರಿ ಸ್ವ ಸಹಾಯ ಗುಂಪುಗಳಿಗೆ ರೂ. 30 ಲಕ್ಷಗಳ ಬ್ಯಾಂಕ್ ಸಾಲ ಸಂಪರ್ಕವನ್ನು ಕಲ್ಪಿಸಲಾಗಿರುತ್ತದೆ.

**ಅನುಷ್ಠಾನ ಜಿಲ್ಲೆಗಳಲ್ಲಿ ಕೈಗೊಂಡಿರುವ ಅರಿವು ಕಾರ್ಯಕ್ರಮಗಳ ವಿವರ**

| ಅರಿವು ಕಾರ್ಯಕ್ರಮಗಳು | ಕೈಗೊಳ್ಳಲಾದ ಅರಿವು ಕಾರ್ಯಕ್ರಮಗಳ ಸಂಖ್ಯೆ | ಫಲಾನುಭವಿಗಳ ಸಂಖ್ಯೆ |
|---|---|---|
| ಆರೋಗ್ಯ ಮತ್ತು ಪೌಷ್ಠಿಕಾಂಶ–3 ದಿನಗಳು | 137 | 5993 |
| ಲಿಂಗತ್ವ ಅರಿವು ಕಾರ್ಯಕ್ರಮ–2 ದಿನಗಳು | 97 | 4269 |
| ಕಾನೂನು ಸಾಕ್ಷರತೆ–3 ದಿನಗಳು | 130 | 5826 |
| ಶಿಶು ಮತ್ತು ಮಕ್ಕಳ ಪೋಷಣೆ– 1 ದಿನ | 54 | 2228 |
| ಪುರುಷ ಅಭಿಗಮನ ಕಾರ್ಯಕ್ರಮ– 1 ದಿನ | 51 | 2013 |

**ಕ್ಷೀರ ಸಂಜೀವಿನಿ ಕಾರ್ಯಕ್ರಮದ ಒಟ್ಟಾರೆ ಪ್ರಗತಿ:**

- 30 ಜಿಲ್ಲೆಗಳಲ್ಲಿನ 250 ಮಹಿಳಾ ಹಾಲು ಒಕ್ಕೂಟಗಳ ಒಟ್ಟು 10,000 ಮಹಿಳೆಯರಿಗೆ ಪಶು ಮತ್ತು ಹೈನುಗಾರಿಕೆ ಸಾಕಾಣಿಕೆ ಮತ್ತು ನಿರ್ವಹಣೆ ಕುರಿತು ತರಬೇತಿಯನ್ನು ನೀಡಲಾಗಿರುತ್ತದೆ. ಇದರಲ್ಲಿ ಪ.ಜಾತಿ 2109, ಪ.ಪಂಗಡ 970, ಅಲ್ಪಸಂಖ್ಯಾತ ವರ್ಗ 426 ಮತ್ತು ಇತರೆ ವರ್ಗಕ್ಕೆ ಸೇರಿದ 6,495 ಫಲಾನುಭವಿಗಳಿರುತ್ತಾರೆ. ಜೊತೆಗೆ, 243 ಅಧ್ಯಕ್ಷರುಗಳು, 215 ಕಾರ್ಯದರ್ಶಿಗಳು ಮತ್ತು 1942 ಪದಾಧಿಕಾರಿಗಳಿಗೆ ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮ ಆಯೋಜಿಸಲಾಗಿರುತ್ತದೆ. 702 ಫಲಾನುಭವಿಗಳಿಗೆ ಕಲಿಕಾ ಪ್ರವಾಸವನ್ನು ಗುಜರಾತ್‌ನ ಅಮುಲ್ ಹಾಲು ಉತ್ಪಾದನಾ ಘಟಕಕ್ಕೆ ಆಯೋಜಿಸಲಾಗಿರುತ್ತದೆ. 241 ಮಹಿಳಾ ಸಂಪನ್ಮೂಲ ವ್ಯಕ್ತಿಗಳಿಗೆ ಪಶು ನಿರ್ವಹಣೆ ಮತ್ತು ಹೈನುಗಾರಿಕೆ ಹಾಗೂ ಸ್ವ ಸಹಾಯ ಗುಂಪುಗಳ ಪರಿಕಲ್ಪನೆ ಕುರಿತು ತರಬೇತಿ ನೀಡಲಾಗಿದ್ದು, ಸದರಿಯವರು ಮಹಿಳಾ ಹಾಲು ಒಕ್ಕೂಟದ ಫಲಾನುಭವಿಗಳಿಗೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಿರುತ್ತಾರೆ.
- ಈ ವರೆಗೆ 493 ಸ್ವ ಸಹಾಯ ಗುಂಪುಗಳನ್ನು (ಪ್ರತಿ ಗುಂಪಿಗೆ 17–20 ಸದಸ್ಯರಿರುತ್ತಾರೆ) ಗ್ರಾಮೀಣ ಮಟ್ಟದಲ್ಲಿ ರಚಿಸಲಾಗಿದ್ದು, ಅಗತ್ಯ ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮ ಆಯೋಜಿಸಲಾಗಿದೆ. ಉಳಿತಾಯ ಮೊತ್ತವು ರೂ.120.96 ಲಕ್ಷಗಳಾಗಿರುತ್ತದೆ, ಇದು ಪ್ರತಿ ಗುಂಪಿಗೆ ಸರಿ ಸುಮಾರು ರೂ.24,535/– ಗಳಾಗುವುದು.

ಮುಂದುವರೆದು, ಸದರಿ ಸ್ವ ಸಹಾಯ ಗುಂಪುಗಳಿಗೆ ರೂ.200.00 ಲಕ್ಷಗಳ ಬ್ಯಾಂಕ್ ಸಾಲ ಸಂಪರ್ಕವನ್ನು ಕಲ್ಪಿಸಲಾಗಿರುತ್ತದೆ, ಪ್ರತಿ ಗುಂಪಿಗೆ ಸರಾಸರಿ ರೂ.40,568/– ಆಗಿರುತ್ತದೆ.

- ಜೀವನೋಪಾಯಕ್ಕೆ ಸಂಬಂಧಿಸಿದಂತೆ, 3,992 ಫಲಾನುಭವಿಗಳು ರೂ.10,000 ಮೊತ್ತದ ಹಂಚಿನ ನಿಧಿಯ ಮತ್ತು ಬ್ಯಾಂಕ್ ಸಾಲದ ಸೌಲಭ್ಯದೊಂದಿಗೆ ಕರಾವಿನ ಹಸುವನ್ನು ಕೊಂಡುಕೊಂಡಿರುತ್ತಾರೆ. ಈ ಉದ್ದೇಶಕ್ಕಾಗಿ ರೂ. 1596.80 ಲಕ್ಷ ಮೊತ್ತದ ಬ್ಯಾಂಕ್ ಸಾಲ ಸಂಪರ್ಕ ಕಲ್ಪಿಸಲಾಗಿರುತ್ತದೆ. ಇದು ಈವರೆಗೆ ಜೀವನೋಪಾಯ ಉದ್ದೇಶಕ್ಕಾಗಿ ಹೊಂದಲಾಗಿರುವ ಶೇ. 80 ರಷ್ಟು ಪಾಲನ್ನು ಹೊಂದಿರುತ್ತದೆ. (ಈ ಉದ್ದೇಶಕ್ಕಾಗಿ ತೊಡಗಿಸಲಾಗಿರುವ ಮೊತ್ತವು ಈವರೆಗೆ ರೂ.1,996 ಲಕ್ಷಗಳಾಗಿರುತ್ತದೆ)

**ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ (ಎಂಕೆಎಸ್‌ಪಿ):**

ಕೃಷಿಯಲ್ಲಿ ಮಹಿಳೆಯರ ಪರಿಸ್ಥಿತಿ ಸುಧಾರಣೆ ಮತ್ತು ಮಹಿಳಾ ಸಬಲೀಕರಣದ ಅವಕಾಶಗಳ ಅಭಿವೃದ್ಧಿಗಾಗಿ ಭಾರತ ಸರ್ಕಾರವು “ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ” ಕಾರ್ಯಕ್ರಮವನ್ನು ಎನ್‌ಆರ್‌ಎಲ್‌ಎಮ್ ಕಾರ್ಯಕ್ರಮದ ಉಪ ಘಟಕವಾಗಿ ಜಾರಿಗೆ ತಂದಿರುತ್ತದೆ. ಎಮ್‌ಕೆಎಸ್‌ಪಿ ಕಾರ್ಯಕ್ರಮದ ಪ್ರಾಥಮಿಕ ಉದ್ದೇಶವು ವ್ಯವಸ್ಥಿತವಾದ ಹೂಡಿಕೆ ಮೂಲಕ ಕೃಷಿರಂಗದಲ್ಲಿ ಮಹಿಳೆಯರ ಭಾಗವಹಿಸುವಿಕೆ ಮತ್ತು ಉತ್ಪಾದನೆ ಹೆಚ್ಚಿಸಿ, ತನ್ಮೂಲಕ ಗ್ರಾಮೀಣ ಮಹಿಳೆಯರಲ್ಲಿ ಕೃಷಿ ಆಧಾರಿತ ಜೀವನೋಪಾಯ ಚಟುವಟಿಕೆಗಳನ್ನು ರೂಪಿಸುವುದು ಮತ್ತು ಸ್ಥಿರಗೊಳಿಸುವುದಾಗಿದೆ. ರಾಜ್ಯ ಸರ್ಕಾರದಿಂದ ಸಲ್ಲಿಸಿದ ಅನುಮೋದಿತ ಪ್ರಸ್ತಾವನೆಗಳಿಗೆ ಗ್ರಾಮೀಣಾಭಿವೃದ್ಧಿ ಸಚಿವಾಲಯವು ಶೇ.75 ರಷ್ಟು ಅನುದಾನವನ್ನು/ಹಣಕಾಸಿನ ಬೆಂಬಲವನ್ನು ಒದಗಿಸುವುದು. ಉಳಿಕೆ ಅನುದಾನವನ್ನು ರಾಜ್ಯ ಸರ್ಕಾರವು ಕಾರ್ಯಕ್ರಮ ಅನುಷ್ಠಾನ ಸಂಸ್ಥೆಯ ಮೂಲಕ ನೀಡುವುದು.

ಭಾರತ ಸರ್ಕಾರವು ಗ್ರೀನ್ ಫೌಂಡೇಷನ್ ಸಂಸ್ಥೆಗೆ (ಪಿಐಎ) ರಾಮನಗರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಎಮ್‌ಕೆಎಸ್‌ಪಿ ಯೋಜನೆಯನ್ನು ಅನುಷ್ಠಾನಗೊಳಿಸಲು ರೂ.6.25 ಕೋಟಿ ಮೊತ್ತದ ಯೋಜನೆಯನ್ನು ಮಂಜೂರು ಮಾಡಿರುತ್ತದೆ, ಈವರಗೆ ರೂ.4.62 ಕೋಟಿಗಳನ್ನು ಖರ್ಚು ಮಾಡಲಾಗಿರುತ್ತದೆ. ಪ್ರಸ್ತುತ ಕಾರ್ಯಕ್ರಮವನ್ನು ಅಂತಿಮಗೊಳಿಸಿದ್ದು, ಮೌಲ್ಯಮಾಪನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಅಂತೆಯೇ, ಭಾರತ ಸರ್ಕಾರವು ಇನಿಷಿಯೇಟಿವ್ ಫಾರ್ ಡೆವಲಪ್‌ಮೆಂಟ್ (ಐಡಿಎಫ್) ಸಂಸ್ಥೆಗೆ ತುಮಕೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ರೂ.15 ಕೋಟಿ ಮೊತ್ತದ ಯೋಜನೆಯನ್ನು ಮಂಜೂರು ಮಾಡಿದೆ. 2014–15ನೇ ಸಾಲಿನಲ್ಲಿ ಸದರಿ ಸಂಸ್ಥೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಮೊದಲನೇ ಕಂತಿನ ಮೊತ್ತ ರೂ.3.75 ಕೋಟಿಗಳನ್ನು ಮಂಜೂರು ಮಾಡಲಾಗಿದೆ. ಜೊತೆಗೆ ಈ ಕಾರ್ಯಕ್ರಮವು ಸೆಪ್ಟೆಂಬರ್ ಮಾಹೆ 2016ಕ್ಕೆ ಮುಕ್ತಾಯಗೊಂಡಿರುತ್ತದೆ.

ಮುಂದುವರೆದು ಕಲುಬುರಗಿ ಜಿಲ್ಲೆಯ ಮೈರಾಡ ಸಂಸ್ಥೆಗೆ ಎಮ್‌ಕೆಎಸ್‌ಪಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ.3.21 ಕೋಟಿ ಮೊತ್ತದ ಯೋಜನೆಯನ್ನು ಮಂಜೂರು ಮಾಡಲಾಗಿದ್ದು, 2014–15 ನೇ ಸಾಲಿನಲ್ಲಿ ಮೊದಲನೇ ಕಂತಿನ ಹಣವಾಗಿ ಕೇಂದ್ರ ಸರ್ಕಾರವು ರೂ.0.6016 ಕೋಟಿಗಳನ್ನು ಮೈರಾಡ ಸಂಸ್ಥೆಗೆ ಮಂಜೂರು ಮಾಡಿರುತ್ತದೆ. ಅದರಂತೆ ಮುಂದುವರೆದು 2015–16 ರಲ್ಲಿ ರಾಜ್ಯ ಸರ್ಕಾರದ ಅನುದಾನ ರೂ.0.20 ಕೋಟಿಗಳನ್ನು ಮಂಜೂರು ಮಾಡಿದ್ದು, 2016–17 ನೇ ಸಾಲಿನಲ್ಲಿ ರೂ. 80.16 ಲಕ್ಷ ಅನುದಾನವನ್ನು ಮೈರಾಡ ಸಂಸ್ಥೆಗೆ ನೀಡಲಾಗಿದೆ.

**2016–17ನೇ ಸಾಲಿನಲ್ಲಿ ಸಾಧಿಸಲಾಗಿರುವ ಪ್ರಗತಿ**

| ಕಾರ್ಯಕ್ರಮ ಅನುಷ್ಠಾನ ಸಂಸ್ಥೆ | ಪ್ರದೇಶ | | ಆಯ್ಕೆಯಾದ ಫಲಾನುಭವಿಗಳ ವಿವರ | | ಆಯವ್ಯಯ ವಿವರ (ರೂ. ಲಕ್ಷಗಳಲ್ಲಿ) | |
|---|---|---|---|---|---|---|
| | ಜಿಲ್ಲೆ | ತಾಲ್ಲೂಕು | ಗುರಿ | ಸಾಧನೆ | ಬಿಡುಗಡೆ | ವೆಚ್ಚ |
| ಐಡಿಎಫ್ | ಬೆಳಗಾಂ | ರಾಯಬಾಗ್ | 11000 | 11000 | 354.00 | 354.00 |
| | ತುಮಕೂರು | ಗುಬ್ಬಿ | | | | |
| ಮೈರಾಡ | ಕಲ್ಬುರ್ಗಿ | ಸೇಡಂ | 3000 | 3000 | 80.16 | 80.16 |
| **ಒಟ್ಟು** | | | **14000** | **14000** | **434.16** | **434.16** |

ಪ್ರಸಕ್ತ ಸಾಲಿನಲ್ಲಿ ಅನುಷ್ಠಾನ ಸಂಸ್ಥೆಗಳಾದ ಐಡಿಎಫ್ ಮತ್ತು ಮೈರಾಡ ಸಂಸ್ಥೆಗಳಿಗೆ ರೂ. 354.00 ಲಕ್ಷ ಹಾಗೂ ರೂ. 80.16 ಲಕ್ಷ ಅನುದಾನವನ್ನು ಕ್ರಮವಾಗಿ ಮಂಜೂರು ಮಾಡಲಾಗಿದೆ, ಈವರೆಗೆ ಯೋಜನೆಯ ಅನುಷ್ಠಾನಕ್ಕಾಗಿ ರೂ.434.16 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಐಡಿಎಫ್ ಮತ್ತು ಮೈರಾಡ ಸಂಸ್ಥೆಗಳು ಕಾರ್ಯಕ್ರಮ ಅನುಷ್ಠಾನ ಸಂಸ್ಥೆಗಳಾಗಿದ್ದು, ಈ ಸಂಸ್ಥೆಗಳಿಗೆ ಕಳೆದ ಮೂರು ವರ್ಷಗಳಿಂದ ಮಂಜೂರು ಮಾಡಲಾಗಿರುವ ಒಟ್ಟಾರೆ ಅನುದಾನ ರೂ.434.16 ಲಕ್ಷಗಳಾಗಿದ್ದು, ಶೇ.100 ರಷ್ಟು ಮಂಜೂರಾದ ಮೊತ್ತವನ್ನು ಅನುಷ್ಠಾನ ಜಿಲ್ಲೆಗಳಾದ ತುಮಕೂರು, ಬೆಳಗಾಂ ಮತ್ತು ಕಲ್ಬುರ್ಗಿಯಲ್ಲಿ ಕಾರ್ಯಕ್ರಮ ಅನುಷ್ಠಾನದ ಉದ್ದೇಶಕ್ಕಾಗಿ ಬಳಸಲಾಗಿದ್ದು, ಒಟ್ಟು 14,000 ಮಹಿಳಾ ಕಿಸಾನ್‌ರವರು ಫಲಾನುಭವಿಗಳಾಗಿರುತ್ತಾರೆ.

**ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ ಕಾರ್ಯಕ್ರಮದ ಒಟ್ಟಾರೆ ಪ್ರಗತಿ:**

- ಸ್ಥಿರ ಕೃಷಿ ಪದ್ಧತಿ ಮತ್ತು ಇತರೆ ಕೃಷಿ ಸಂಬಂಧಿತ ಪ್ರಮುಖ ಚಟುವಟಿಕೆಗಳ ಕುರಿತು ಕಾರ್ಯಕ್ರಮ ಅನುಷ್ಠಾನದ ಐದು ಜಿಲ್ಲೆಗಳಲ್ಲಿ (ತುಮಕೂರು–ಗುಬ್ಬಿ ತಾಲ್ಲೂಕು, ಚಿತ್ರದುರ್ಗ–ಚಳ್ಳಕೆರೆ ತಾಲ್ಲೂಕು, ರಾಮನಗರ–ಕನಕಪುರ ತಾಲ್ಲೂಕು, ಬೆಳಗಾವಿ–ರಾಯಬಾಗ್ ತಾಲ್ಲೂಕು ಮತ್ತು ಗುಲ್ಬರ್ಗಾ–ಸೇಡಂ ತಾಲ್ಲೂಕು) ಒಟ್ಟಾರೆ 19,000 ಫಲಾನುಭವಿಗಳಿಗೆ ಸೌಲಭ್ಯ ದೊರಕಿಸಲಾಗಿರುತ್ತದೆ.
- ಕಾರ್ಯಕ್ರಮದ ಉದ್ದೇಶದಂತೆ, 22 ಒಕ್ಕೂಟಗಳನ್ನು, 220 ಉತ್ಪಾದಕರ ಗುಂಪುಗಳನ್ನು ರಚಿಸಲಾಗಿರುತ್ತದೆ.
- 1,141 ಸ್ವ ಸಹಾಯ ಗುಂಪುಗಳನ್ನು ರಚಿಸಲಾಗಿದ್ದು, ಈವರೆಗೆ ರೂ.6931 ಲಕ್ಷ ಸಾಲ ಸಂಪರ್ಕವನ್ನು ಒದಗಿಸಲಾಗಿರುತ್ತದೆ.
- ಈವರೆಗೆ 392 ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿದ್ದು, ತರಬೇತಿ ನೀಡಲಾಗಿದ್ದು, ಇವರ ಮೂಲಕ ಫಲಾನುಭವಿಗಳಿಗೆ ಕ್ಷೇತ್ರಮಟ್ಟದಲ್ಲಿ ಸ್ಥಿರ ಕೃಷಿ ಪದ್ಧತಿ ಕುರಿತು ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಿರುತ್ತಾರೆ.
- ಕೃಷಿಕ್ಷೇತ್ರದಲ್ಲಿ ಮಹಿಳೆಯರಿಗೆ ಅನಾವಶ್ಯಕ ಪರಿಶ್ರಮವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ವಿವಿಧ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ. ಅದರಲ್ಲಿ 2,900 ಹೊಗೆ ರಹಿತ ಒಲೆಗಳನ್ನು ಮತ್ತು 325 ಜೋಳಿಗೆ ಸ್ಪ್ರೇಗಳನ್ನು ವಿತರಿಸಲಾಗಿದೆ. 3,365 ಫಲಾನುಭವಿಗಳ ಮನೆಯ ಹಿಂಬದಿಯಲ್ಲಿ ಹಿತ್ತಲು ತೋಟವನ್ನು ಮಾಡಲಾಗಿದೆ.
- ಫಲಾನುಭವಿಗಳ ಕೃಷಿ ಸಂಬಂಧಿತ ಜ್ಞಾನದ ಉತ್ತಮ ಗ್ರಹಿಕೆಗಾಗಿ ಮತ್ತು ಅರ್ಥಮಾಡಿಸುವಿಕೆ ಕುರಿತು ಅಭಿವೃದ್ಧಿಪಡಿಸುವಿಕೆಗೆ ಸಂಬಂಧಿಸಿದಂತೆ 283 ಆಡಿಯೋ ದೃಶ್ಯ ಸಾಧನಗಳನ್ನು ಸ್ಥಿರ ಕೃಷಿ ಪದ್ಧತಿಯ ವಿವಿಧ ವಿಷಯಗಳು ಮತ್ತು ಪದ್ಧತಿಗಳನ್ನು ಕುರಿತು ತಯಾರಿಸಲಾಗಿದ್ದು, ಇವುಗಳನ್ನು ಗ್ರಾಮ ಮಟ್ಟದಲ್ಲಿ ಮಹಿಳಾ ಕೃಷಿಕರಿಗೆ ಕೃಷಿ ಕುರಿತ ಸಾಮರ್ಥ್ಯ ಬಲವರ್ಧನೆಗೆ ಉಪಯೋಗಿಸಲಾಗುತ್ತಿದೆ.

**ಮೈಕ್ರೋ ಎಂಟರ್‌ಪ್ರೈಸ್ ಕನ್ಸಲ್‌ಟೆಂಟ್ ಪ್ರಾಜೆಕ್ಟ್: (ಸಮುದಾಯ ಆಧಾರಿತ ಸಂಪನ್ಮೂಲಗಳ ಪೂರೈಕೆ ಮತ್ತು ಬೆಂಬಲದೊಂದಿಗೆ ಕಿರು ಉದ್ಯಮಗಳ ಅಭಿವೃದ್ಧಿ)**

ಕಿರು ಉದ್ಯಮಗಳ ಮೂಲಕ ಸ್ವ ಉದ್ಯೋಗ ರಂಗವನ್ನು ಅಭಿವೃದ್ಧಿಪಡಿಸುವುದು ಭಾರತ ಸರ್ಕಾರದ ಜೀವನೋಪಾಯ ಚಟುವಟಿಕೆಯ ಪ್ರಮುಖ ಕಾರ್ಯತಂತ್ರವಾಗಿದ್ದು, ಸ್ವ ಉದ್ದಿಮೆ ಕ್ಷೇತ್ರದ ಮೂಲಕ ಗ್ರಾಮೀಣ ಬಡಜನರಿಗೆ ಜೀವನೋಪಾಯ ಚಟುವಟಿಕೆಗಳನ್ನು ರೂಪಿಸುವ ಯೋಜನೆಯನ್ನು ಅನುಷ್ಠಾನ ಮಾಡಲು ಇರುವ ಪ್ರಮುಖ ತೊಡಕೆಂದರೆ ಸ್ಥಳೀಯ ಮಟ್ಟದಲ್ಲಿ ಕಿರು ಉದ್ದಿಮೆದಾರರಿಗೆ ಅವಶ್ಯ ಮಾರ್ಗದರ್ಶನ ಮತ್ತು ಅನುಸರಣೆಯನ್ನು ಒದಗಿಸುವ ನಿಟ್ಟಿನಲ್ಲಿ ಯಾವುದೇ ವ್ಯವಸ್ಥೆಯನ್ನು ರಚಿಸದಿರುವುದು.

ಈ ಅಂಶವನ್ನು ತೀಕ್ಷ್ಣವಾಗಿ ಪರಿಗಣಿಸಿದ ಕೆಎಸ್‌ಆರ್‌ಎಲ್‌ಪಿಎಸ್–ಸಂಜೀವಿನಿ ಸಂಸ್ಥೆಯು ಕಿರು ಉದ್ದಿಮೆಗಳ ಸಮಾಲೋಚಕರ (Micro Enterprise Consultant) ಕಾರ್ಯಕ್ರಮವನ್ನು ರಾಜ್ಯದಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನ ಮಾಡುವ ಉದ್ದೇಶದಿಂದ ರಾಷ್ಟ್ರೀಯ ಸಂಪನ್ಮೂಲ ಸಂಸ್ಥೆಯಾದ ಕುಡುಂಬಶ್ರೀ ಸಂಸ್ಥೆ–ಕೇರಳ ರವರೊಂದಿಗೆ ಮೂರು ವರ್ಷಗಳ

ಅವಧಿಗೆ ಒಡಬಂಡಿಕೆಯನ್ನು ಮಾಡಿಕೊಂಡು, ಪ್ರಾಯೋಗಿಕವಾಗಿ ರಾಜ್ಯದ ಆಯ್ದ ಮೂರು ಜಿಲ್ಲೆಗಳಲ್ಲಿ (ಗದಗ, ಹಾಸನ ಮತ್ತು ಮೈಸೂರು) ಅನುಷ್ಠಾನಗೊಳಿಸುತ್ತಿದೆ. ಇದರ ಪ್ರಕ್ರಿಯೆಯಲ್ಲಿ ಸ್ಥಳೀಯ ಮಟ್ಟದಲ್ಲಿ ಅರ್ಹ ಮಹಿಳೆಯರನ್ನು ಹಾಗೂ ಪುರುಷರನ್ನು ಗುರುತಿಸಿ, ಅವರುಗಳಿಗೆ ಕಿರು ಉದ್ದಿಮೆಗಳ ರಚನೆ, ನಿರ್ವಹಣೆ ಮತ್ತು ಸುಸ್ಥಿರಗೊಳಿಸುವ ನಿಟ್ಟಿನಲ್ಲಿ ವಿಸ್ತೃತ ತರಬೇತಿಗಳನ್ನು ನೀಡಿದ್ದು, ಅವಶ್ಯ ಸಾಮರ್ಥ್ಯ ಬಲವರ್ಧನೆ ಮಾಡಲಾಗಿರುತ್ತದೆ. ಹೀಗೆ ತರಬೇತಿ ಪಡೆದ ಕಿರು ಉದ್ದಿಮೆ ಸಮಾಲೋಚಕರುಗಳು ಸ್ಥಳೀಯ ಮಟ್ಟದಲ್ಲಿ ಕಿರು ಉದ್ದಿಮೆಗಳ ಅಭಿವೃದ್ದಿಗೆ ಪೂರಕ ಮಾಹಿತಿ, ಮಾರ್ಗದರ್ಶನ ಮತ್ತು ಸಹಕಾರ ಒದಗಿಸುತ್ತಿರುತ್ತಾರೆ. ಈ ಯೋಜನೆಯ ಅವಧಿಯು 3 ವರ್ಷವಾಗಿದ್ದು, ಕಾರ್ಯಕ್ರಮ ಅನುಷ್ಠಾನಕ್ಕಾಗಿ ರೂ.4.6 ಕೋಟಿ ಅನುದಾನವನ್ನು ನಿಗದಿಪಡಿಸಲಾಗಿದೆ.

**ಪ್ರಗತಿ ವರದಿ**

| ಕಾರ್ಯಕ್ರಮ ಅನುಷ್ಠಾನ ಪಾಲುದಾರರು | ಕಾರ್ಯಕ್ರಮ ಅನುಷ್ಠಾನ ಜಿಲ್ಲೆಗಳು | ಅಭಿವೃದ್ಧಿಪಡಿಸಲಾದ ಕಿರು ಉದ್ದಿಮೆ ಸಮಾಲೋಚಕರು | | ಆಯವ್ಯಯ ವಿವರ (ರೂ. ಲಕ್ಷಗಳಲ್ಲಿ) | | |
|---|---|---|---|---|---|---|
| | ಜಿಲ್ಲೆ | ಗುರಿ | ಪ್ರಗತಿ | ನಿಗದಿಪಡಿಸಿದ ಅನುದಾನ | ಮಂಜೂರಾದ ಅನುದಾನ | ಖರ್ಚು |
| ಕುಡುಂಬಶ್ರೀ | ಗದಗ, ಹಾಸನ ಮತ್ತು ಮೈಸೂರು | 2250 | 2131 | 150 | 61.40 | 61.08 |

ಕಾರ್ಯಕ್ರಮದ ಕಾರ್ಯತಂತ್ರವಾಗಿ ಮೊದಲಿಗೆ ಮೂರು ಅನುಷ್ಠಾನ ಜಿಲ್ಲೆಗಳಲ್ಲೂ ತಲಾ 45 ಎಮ್‌ಇಸಿಗಳನ್ನು ಗುರುತಿಸಿದ್ದು, ಒಟ್ಟು 135 ಎಮ್‌ಇಸಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿರುತ್ತದೆ. ಹೀಗೆ ಆಯ್ಕೆಯಾದ ಎಮ್‌ಇಸಿಗಳಿಗೆ ಮೂರು ದಿನದ ಅವಧಿಯ ಅಭಿಶಿಕ್ಷಣ ತರಬೇತಿಯನ್ನು ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಳ್ಳಲಾಗಿರುತ್ತದೆ. ಆ ಮೂಲಕ ಅವರವರ ಕೌಶಲ್ಯ ಮತ್ತು ಆಶಕ್ತಿಗನುಗುಣವಾಗಿ ಕ್ರೀಮ್ ಮತ್ತು ಸಾಮಾನ್ಯ ಎಮ್‌ಇಸಿಗಳೆಂದು ಎರಡು ವಿಧಾನಗಳನ್ನಾಗಿ ವಿಂಗಡಿಸಲಾಗಿರುತ್ತದೆ. ಇದರಂತೆ ಪ್ರತೀ ಜಿಲ್ಲೆಗಳಿಂದ 12 ರಂತೆ ಒಟ್ಟು 36 ಕ್ರೀಮ್ ಎಮ್‌ಇಸಿಗಳನ್ನು ಆಯ್ಕೆಮಾಡಿಕೊಳ್ಳಲಾಗಿರುತ್ತದೆ. ಕ್ರೀಮ್ ಎಮ್‌ಇಸಿಗಳಿಗೆ "ಗ್ರಾಮೀಣ ಉದ್ಯಮ ಮತ್ತು ಆಡಳಿತ ನಿರ್ವಹಣೆ ಅದ್ಯಯನ" ಕುರಿತು 5 ದಿನಗಳ ಅವಧಿಯ ಆರು ತರಬೇತಿಗಳನ್ನು ಮೈಸೂರಿನ ಎಸ್‌ಐಆರ್‌ಡಿ ಸಂಸ್ಥೆಯಲ್ಲಿ ಆಯೋಜಿಸಲಾಗಿರುತ್ತದೆ. ಉಳಿದ ಸಾಮಾನ್ಯ ಎಮ್‌ಇಸಿಗಳಿಗೆ ಜಿಲ್ಲಾ ಮಟ್ಟದಲ್ಲಿ "ಕಿರು ಉಧ್ಯಮಗಳ ಅಭಿವೃದ್ಧಿ ಮತ್ತು ಉದ್ದಿಮೆ ಹಾಗೂ ಆಡಳಿತ ನಿರ್ವಹಣೆ ಅಧ್ಯಯನ" ಕುರಿತು ತರಬೇತಿ ನೀಡಲಾಗಿರುತ್ತದೆ.

ಈ ರೀತಿಯಾಗಿ ಆಯ್ಕೆಗೊಂಡು ತರಬೇತಿ ಪಡೆದ ಎಮ್‌ಇಸಿಗಳು ತರಬೇತಿಯ ಜೊತೆಗೆ ಕ್ಷೇತ್ರ ಮಟ್ಟದಲ್ಲಿ ಕಿರು ಉದ್ದಿಮೆಗಳ ಮಾಹಿತಿಯನ್ನು ಸಂಗ್ರಹಿಸುವುದರ ಜೊತೆಗೆ ದೊರೆಯುವ ಸಂಪನ್ಮೂಲಗಳು ಮತ್ತು ಕಿರು ಉದ್ದಿಮೆಗಳನ್ನು ಸ್ಥಾಪಿಸಲು ಇರುವ ಬೇಡಿಕೆ ಕುರಿತು ಅಧ್ಯಯನ ನಡೆಸಿರುತ್ತಾರೆ. ಹೀಗೆ ಕ್ಷೇತ್ರ ಮಟ್ಟದ ಅಧ್ಯಯನ ಮತ್ತು ವಿಶ್ಲೇಷಣೆಗಾಗಿ ಅವಶ್ಯ ಮಾರ್ಗದರ್ಶನ ನೀಡಲು ಕುಡುಂಬಶ್ರೀ ಸಂಸ್ಥೆಯಿಂದ ಪ್ರತಿ ಜಿಲ್ಲೆಗೆ ಇಬ್ಬರು ಮೆಂಟರ್ ಎಮ್‌ಇಸಿಗಳನ್ನು ನೇಮೀಸಿರುತ್ತಾರೆ. ಈ ಕಾರ್ಯಕ್ರಮವನ್ನು ವಿದ್ಯುಕ್ತವಾಗಿ ಸೆಪ್ಟೆಂಬರ್ 2016ರಿಂದ ಅನುಷ್ಠಾನಗೊಳಿಸಲಾಗಿರುತ್ತದೆ.

ಕಾರ್ಯಕ್ರಮದ ಮಾರ್ಗಸೂಚಿಯಂತೆ ಮೊದಲಿಗೆ 187 ಕಿರು ಉದ್ದಿಮೆಗಳ ಸಮಾಲೋಚಕರನ್ನು ಗುರುತಿಸಿದ್ದು, ಅವರುಗಳಲ್ಲಿ ಆಶಕ್ತಿ ಹೊಂದಿರುವ ಮತ್ತು ಸೂಕ್ತ ಸಮಯ ಹಾಗೂ ಶ್ರಮವನ್ನು ವ್ಯಹಿಸಲು ಸಾಧ್ಯವಿರುವ 135 ಎಮ್‌ಇಸಿಗಳು ಅಂತಿಮವಾಗಿ ಕಾರ್ಯಕ್ರಮದಲ್ಲಿ ನೆಲೆಗೊಂಡಿರುತ್ತಾರೆ. ಹೀಗೆ ಎಮ್‌ಇಸಿಗಳಿಗೆ ಸ್ಥಳೀಯ ಮಟ್ಟದಲ್ಲಿ ಸೂಕ್ತ ಮಾರ್ಗದರ್ಶನ ಮತ್ತು ಬೆಂಬಲವನ್ನು ನೀಡಲು ಪ್ರತಿ ಜಿಲ್ಲೆಗೆ ಇಬ್ಬರು ಮೆಂಟರ್ ಎಮ್‌ಇಸಿಗಳನ್ನು ಕುಡುಂಬಶ್ರೀ ಸಂಸ್ಥೆಯಿಂದ ನಿಯೋಜಿಸಲಾಗಿರುತ್ತದೆ.

ಮೂರು ಅನುಷ್ಠಾನ ಜಿಲ್ಲೆಗಳಲ್ಲಿ ಈವರೆಗೆ 2131 ಕಿರು ಉದ್ದಿಮೆಗಳನ್ನು ಸ್ಥಾಪಿಸಲಾಗಿದ್ದು, ಸಂಪೂರ್ಣವಾಗಿ ಫಲಾನುಭವಿಗಳ ಬಂಡವಾಳದಲ್ಲಿ ಪ್ರಾರಂಭಿಸಲಾಗಿರುತ್ತದೆ (ಈ ಬಂಡವಾಳವು ಸ್ವ ಸಹಾಯ ಗುಂಪಿನಿಂದ ಪಡೆದ ಮತ್ತು ಬ್ಯಾಂಕ್‌ನಿಂದ ಪಡೆದ ಸಾಲಗಳನ್ನು ಒಳಗೊಂಡಿರುತ್ತದೆ. ಸುಮಾರು 20 ವಲಯಗಳಲ್ಲಿ ಕಿರು ಉದ್ದಿಮೆಗಳನ್ನು ಪ್ರಾರಂಭಿಸಲಾಗಿರುತ್ತದೆ. ಉದಾಹರಣೆಗೆ ಕೆಫೆ, ದಿನಸಿ ಅಂಗಡಿ, ಅಕ್ಕಿ ವ್ಯಾಪಾರ ಇತ್ಯಾದಿ. ಈವರೆಗೆ ಹೂಡಿಕೆ ಮಾಡಲಾಗಿರುವ ಬಂಡವಾಳದ ಮೊತ್ತ ಅಂದಾಜು ರೂ.876 ಲಕ್ಷಗಳಾಗಿದ್ದು, 2262 ಕಿರು ಉದ್ದಿಮೆದಾರರಿರುತ್ತಾರೆ.

**ಮೈಕ್ರೋ ಎಂಟರ್‌ಪ್ರೈಸಸ್ ಕನ್ಸಲ್ಟೆಂಟ್ ಕಾರ್ಯಕ್ರಮದ ಒಟ್ಟಾರೆ ಪ್ರಗತಿ:**

- 135 ಎನ್‌ಇಸಿಗಳು ಪ್ರತಿ ತಾಲ್ಲೂಕಿಗೆ ಸುಮಾರು 45 ರಂತೆ ಸ್ಥಳೀಯ ಮಟ್ಟದಲ್ಲಿ ಕಿರು ಉದ್ದಿಮೆಗಳ ರಚನೆ ಮತ್ತು ಅಭಿವೃದ್ಧಿಗೆ ಸೂಕ್ತ ಪ್ರೇರಣೆ, ಮಾರ್ಗದರ್ಶನ ಮತ್ತು ಬೆಂಬಲ ನೀಡುತ್ತಿದ್ದು, ಈವರೆಗೆ ಒಟ್ಟು 2131 ಕಿರು ಉದ್ದಿಮೆಗಳನ್ನು ಸ್ಥಾಪಿಸಲಾಗಿರುತ್ತದೆ.
- ಹೀಗೆ ರಚನೆಗೊಂಡಿರುವ ಕಿರು ಉದ್ದಿಮೆಗಳು ಜಿಲ್ಲಾವಾರು ಹೀಗಿವೆ; ಗದಗ–848, ಹಾಸನ–776 ಮತ್ತು ಮೈಸೂರು 507 ಆಗಿರುತ್ತವೆ.
- ಇವುಗಳಲ್ಲಿ 1749 ಹೊಸದಾಗಿ ರಚನೆಗೊಂಡಿರುವ ಕಿರು ಉದ್ದಿಮೆಗಳಾದರೆ, 366 ಉದ್ದಿಮೆಗಳು ಈಗಾಗಲೇ ಅಸ್ಥಿತ್ವದಲ್ಲಿದ್ದವು ಮತ್ತು 16 ಉದ್ದಿಮೆಗಳು ಈ ಹಿಂದೆ ಮುಚ್ಚಿದ್ದು, ಎಮ್‌ಇಸಿಗಳ ಮಾರ್ಗದರ್ಶನದ ಮೂಲಕ ಪ್ರಸ್ತುತ ಕ್ರಿಯಾಶೀಲವಾಗಿರುತ್ತವೆ.
- ಒಟ್ಟಾರೆ 2,250 ಕಿರು ಉದ್ದಿಮೆಗಳಲ್ಲಿ 2262 ಕಿರು ಉದ್ದಿಮೆದಾರರು ಜೀವನೋಪಾಯವನ್ನು ಕಂಡುಕೊಂಡಿರುತ್ತಾರೆ.
- ಕಿರು ಉದ್ದಿಮೆಗಳ ಪ್ರಾರಂಭಕ್ಕಾಗಿ ರೂ 816 ಲಕ್ಷಗಳನ್ನು ಬಂಡವಾಳವಾಗಿ ತೊಡಗಿಸಿದ್ದು, ಪ್ರತಿ ಕಿರು ಉದ್ದಿಮೆಗೆ ಸರಾಸರಿ ರೂ. 41,107/– ಗಳಾಗಿದೆ.
- ಗದಗ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿನ 18 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಈವರೆಗೆ 19 ವಾರದ ಸಂತೆಗಳನ್ನು ಆಯೋಜಿಸಲಾಗಿರುತ್ತದೆ. ಇದರಲ್ಲಿ 610 ಕಿರು ಉದ್ದಿಮೆದಾರರು ಸಕ್ರಿಯವಾಗಿ ತೊಡಗಿಕೊಂಡಿದ್ದು, ತಾಜಾ ತರಕಾರಿಗಳು, ಗಾರ್ಮೆಂಟ್ಸ್/ ಬಟ್ಟೆಗಳು, ದಿನಸಿ, ಚಪ್ಪಲಿ, ಪಶು ಸಂಗೋಪನೆಗೆ ಸಂಬಂಧಿಸಿದ ಉಪಕರಣಗಳು ಇತ್ಯಾದಿಗಳನ್ನು ಮಾರಾಟ ಮಾಡಲಾಗುತ್ತಿರುತ್ತದೆ. ಪ್ರತಿ ವಾರವು ನಡೆಯುವ ಸಂತೆಯಲ್ಲಿ ಹಣಕಾಸು ವ್ಯವಹಾರವು ಕನಿಷ್ಟ ರೂ.25,000 ದಿಂದ ರೂ.2,00,000 ಗಳಾಗಿರುತ್ತದೆ.

**ಹಣಕಾಸು ಸೇರ್ಪಡೆ:**

ಹಣಕಾಸು ಸೇರ್ಪಡೆ ಪ್ರಕ್ರಿಯೆಯು ಬಡ ಜನರಿಗೆ ಹಣಕಾಸು ಸೇವೆಗಳನ್ನು ಸುಲಭವಾಗಿ ದೊರೆಯುವಂತೆ ಮಾಡುವುದಾಗಿರುತ್ತದೆ. ಕೆಎಸ್‌ಆರ್‌ಎಲ್‌ಪಿಎಸ್ ಯೋಜನೆಯ ಮುಖ್ಯ ಉದ್ದೇಶವು ಗ್ರಾಮೀಣ ಪ್ರದೇಶದ ಸ್ವಸಹಾಯ ಗುಂಪುಗಳು ಸುಲಭ ಮಾರ್ಗದ ಮೂಲಕ ಪೋಷಣೆ ಮತ್ತು ಜೀವನೋಪಾಯ ಚಟುವಟಿಕೆಗಳಿಗೆ ಸಾಲ ಸೌಲಭ್ಯವನ್ನು ವ್ಯವಸ್ಥಿತ ಹಣಕಾಸು ಸಂಸ್ಥೆಗಳಿಂದ ಪಡೆಯುವಂತೆ ಮಾಡುವುದಾಗಿರುತ್ತದೆ.

ಬ್ಯಾಂಕ್‌ಗಳು ಬಡಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ಹಣಕಾಸು ನೆರವನ್ನು ನೀಡಲು ಶ್ರಮಿಸುತ್ತಿದ್ದರೂ ಸಹ, ಬ್ಯಾಂಕ್‌ಗಳ ಮೂಲಕ ಗ್ರಾಮೀಣ ಭಾಗದ ಎಲ್ಲಾ ವರ್ಗದ ಬಡಜನರನ್ನು ತಲುಪುವುದು ಕಷ್ಟವಾಗಿರುತ್ತದೆ. ಇದರಿಂದಾಗಿ ಗ್ರಾಮಾಂತರ ಪ್ರದೇಶದ ಅರ್ಹ ಜನತೆಗೆ ಹಣಕಾಸು ಸೌಲಭ್ಯ ಪೂರ್ಣ ಪ್ರಮಾಣದಲ್ಲಿ ಲಭ್ಯವಾಗುತ್ತಿಲ್ಲ. ಬ್ಯಾಂಕ್ ನಂತಹ ಹಣಕಾಸು ಸಂಸ್ಥೆಗಳು ಅತ್ಯಂತ ಹಿಂದುಳಿದ ಸೌಲಭ್ಯ ರಹಿತ ಗ್ರಾಮಗಳನ್ನು ತಲುಪಲು ದುಸ್ತರವಾಗಿದೆ.

ಈ ಕಾರಣದಿಂದಾಗಿ ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯು ಹಣಕಾಸು ಸೇವೆಯನ್ನು ಬಡಜನರಿಗೆ ಒದಗಿಸಲು ಮತ್ತು ಅವರನ್ನು ಬಡತನದ ಪರಿಸ್ಥಿತಿಯಿಂದ ಹೊರತಂದು ಶಾಶ್ವತ ಅಭಿವೃದ್ಧಿ ಸಾಧಿಸುವ ಕಾರ್ಯದಲ್ಲಿ ಪ್ರವೃತ್ತವಾಗಿದೆ. ಸ್ವ ಸಹಾಯ

ಗುಂಪುಗಳಿಗೆ ಬ್ಯಾಂಕ್ ಸಾಲ ಸೌಕರ್ಯ ಒದಗಿಸುವ ಕಾರ್ಯಕ್ರಮದ ಮುಖ್ಯ ಉದ್ದೇಶವು ಅದೇ ಆಗಿದ್ದು, 2016–17ನೇ ಸಾಲಿನಲ್ಲಿ 215608 ಸ್ವ ಸಹಾಯ ಗುಂಪುಗಳ ಸದಸ್ಯರಿಗೆ ರೂ.5471.48 ಕೋಟಿ ಸಾಲ ಸೌಲಭ್ಯ ದೊರಕಿಸಿ ಕೊಡಲಾಗಿದೆ.

**ಹಣಕಾಸು ಸೇರ್ಪಡೆ ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡಿರುವ ಕಾರ್ಯತಂತ್ರಗಳು:**

**ರಾಜ್ಯ ಮಟ್ಟದಲ್ಲಿ ಸ್ವಸಹಾಯ ಗುಂಪುಗಳ ಸಂಬಂಧ ಕ್ರಿಯಾಶೀಲ ರಾಜ್ಯ ಮಟ್ಟದ ಬ್ಯಾಂಕರ್ಸ್ ಸಭೆ ನಡೆಸುವುದು:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು–ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಿಗದಿಪಡಿಸಿರುವಂತೆ ಪ್ರತಿ ಮೂರು ತಿಂಗಳಿಗೊಮ್ಮೆ ರಾಜ್ಯ ಮಟ್ಟದ ಬ್ಯಾಂಕರ್ಸ್ ಸಭೆಯನ್ನು ಪರಿಣಾಮಕಾರಿಯಾಗಿ ನಡೆಸಲಾಗುತ್ತಿದೆ. ಅಗತ್ಯ ಸಂದರ್ಭಗಳಲ್ಲಿ ಹೆಚ್ಚುವರಿ ಸಭೆಗಳನ್ನು ಸಹ ನಡೆಸಲಾಗುವುದು. ಇದರಿಂದಾಗಿ ಸಮಿತಿಯ ಸದಸ್ಯರುಗಳು ಹೆಚ್ಚಿನ ಮಾಹಿತಿಯೊಂದಿಗೆ ಬ್ಯಾಂಕ್‌ಗಳು ನಿಗದಿತ ಗುರಿಯನ್ನು ಸಾಧಿಸಲು ಸಹಕಾರ ನೀಡಬಹುದಾಗಿದೆ. ಬ್ಯಾಂಕ್‌ಗಳ ಕಾರ್ಯ ಪ್ರವೃತ್ತಿ ಮತ್ತು ಗುಣಮಟ್ಟವನ್ನು ಅಳೆಯಲು, ಪ್ರಗತಿ ಪರಿಶೀಲನೆ ನಡೆಸಿ ಅವಶ್ಯ ಕಾರ್ಯತಂತ್ರ ರೂಪಿಸಲು ಅಳವಡಿಸಿಕೊಳ್ಳಲು ಎಸ್‌ಎಲ್‌ಬಿಸಿ ಉತ್ತಮ ವೇದಿಕೆಯಾಗಿದೆ.

**ಬ್ಯಾಂಕ್ ಸಾಲ ಸಂಪರ್ಕ ಮಾಸಾಚರಣೆ:**

ಬ್ಯಾಂಕ್ ಸಾಲ ಸಂಪರ್ಕ ಮಾಸಾಚರಣೆಯನ್ನು ಮತ್ತು ಎಸ್‌ಸಿ/ಎಸ್‌ಟಿ ಎಸ್‌ಹೆಚ್‌ಜಿ ಬ್ಯಾಂಕ್ ಸಾಲ ಸಂಪರ್ಕ ಮಾಸಾಚರಣೆಯನ್ನು ಜುಲೈ 2016 ರಂದು ನಡೆಸಲಾಗಿದ್ದು, ಬ್ಯಾಂಕ್ ಲಿಂಕೇಜ್ ಹೆಚ್ಚಿಸಲು ಉದ್ದೇಶಿಸಿರುವ ಮಾಸಾಚರಣೆಗೆ, ಅಗತ್ಯ ಸಹಕಾರ ನೀಡುವಂತೆ ಕೋರಿರುತ್ತಾರೆ. ಈ ನಿಟ್ಟಿನಲ್ಲಿ ಬ್ಯಾಂಕ್‌ಗಳು ಉತ್ತಮ ಸಹಕಾರ ನೀಡಿರುತ್ತವೆ. ಈ ಮಾಸಗಳಲ್ಲಿ ಬ್ಯಾಂಕ್‌ಗಳು ಸ್ವ ಸಹಾಯ ಗುಂಪಿನ ಸದಸ್ಯರಿಗೆ ಹೆಚ್ಚಿನ ಮಟ್ಟದಲ್ಲಿ ಸಾಲ ಸಂಪರ್ಕ ಕಲ್ಪಿಸಲಾಗಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಸ್ವ ಸಹಾಯ ಗುಂಪುಗಳ ಸದಸ್ಯರಿಗೆ ಸಾಲ ನೀಡಲು ಬ್ಯಾಂಕ್‌ಗಳ ವತಿಯಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುತ್ತದೆ. ಮೊದಲ ಬಾರಿಗೆ ಬ್ಯಾಂಕ್‌ವಾರು ಸಾಲ ಪಡೆದಿರುವ ಸ್ವ ಸಹಾಯ ಗುಂಪುಗಳು ಮತ್ತು ಸಾಲ ಸೌಲಭ್ಯ ಪಡೆದಿರದ ಸ್ವ ಸಹಾಯ ಗುಂಪುಗಳು ಎಂಬುವುದಾಗಿ ವಿಂಗಡಿಸಿ, ಎಸ್‌ಎಲ್‌ಬಿಸಿಗೆ ವರದಿ ನೀಡಲಾಗಿದೆ. ಈ ಮಾಹಿತಿಯಿಂದಾಗಿ ಸಾಲ ಪಡೆಯಲು ಅರ್ಹವಿರುವ ಸ್ವ ಸಹಾಯ ಗುಂಪುಗಳ ಪಟ್ಟಿಯನ್ನು ತಯಾರಿಸಿ ಸದರಿ ಬ್ಯಾಂಕ್‌ಗಳು ಸ್ವ ಸಹಾಯ ಗುಂಪುಗಳಿಗೆ ಸಾಲ ಸೌಲಭ್ಯ ಕಲ್ಪಿಸಲು ಎಸ್‌ಎಲ್‌ಬಿಸಿ ಮೂಲಕ ತಿಳಿಸಲಾಗಿದೆ. ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಅಧ್ಯಕ್ಷರುಗಳಿಗೆ ವೈಯಕ್ತಿಕವಾಗಿ ಅಪರ ಮುಖ್ಯ ಕಾರ್ಯದರ್ಶಿಗಳು/ಅಧ್ಯಕ್ಷರು ಎಸ್‌ಎಲ್‌ಬಿಸಿ ರವರು ಪತ್ರದ ಮೂಲಕ, ಬ್ಯಾಂಕ್ ಲಿಂಕೇಜ್ ಹೆಚ್ಚಿಸಲು ಉದ್ದೇಶಿಸಿರುವ ಮಾಸಾಚರಣೆಗೆ, ಅಗತ್ಯ ಸಹಕಾರ ನೀಡುವಂತೆ ಕೋರಿರುತ್ತಾರೆ. ಈ ನಿಟ್ಟಿನಲ್ಲಿ ಬ್ಯಾಂಕ್‌ಗಳು ಉತ್ತಮ ಸಹಕಾರ ನೀಡಿರುತ್ತವೆ. ಈ ಕಾರಣದಿಂದಾಗಿ ಸ್ವಸಹಾಯ ಗುಂಪುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸಾಲ ಸೌಲಭ್ಯ ನೀಡಲು ಸಾಧ್ಯವಾಗಿದೆ.

**ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಬ್ಯಾಂಕರ್ಸ್ ಸಮಿತಿ ಸಭೆಯ ರಚನೆ:**

ಜಿಲ್ಲಾ ಮಟ್ಟದಲ್ಲಿ **'ಜಿಲ್ಲಾ ಮಟ್ಟದ ಸಾಲ ಸಮಿತಿ'** ಮತ್ತು ತಾಲ್ಲೂಕು ಮಟ್ಟದಲ್ಲಿ **'ತಾಲ್ಲೂಕು ಮಟ್ಟದ ಬ್ಯಾಂಕರ್ಸ್ ಸಮಿತಿ ಸಭೆ'** ಗಳನ್ನು ನಡೆಸುವುದರ ಮೂಲಕ, ಬ್ಯಾಂಕ್ ಸಾಲ ನೀಡಿಕೆ, ಮರುಪಾವತಿಯಲ್ಲಿನ ತೊಡಕುಗಳನ್ನು ಕುರಿತು ಮಾಹಿತಿಯನ್ನು ನಿಯಮಿತವಾಗಿ ವಿನಿಮಯ ಮಾಡಿಕೊಂಡು ಉತ್ತಮ ಪ್ರಗತಿ ಸಾಧಿಸಲು ಸಾಧ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಜಿಲ್ಲಾ ಮಟ್ಟದಲ್ಲಿ ಡಿಸಿಸಿ/ಡಿಎಲ್‌ಆರ್‌ಸಿ/ ಮತ್ತು ಬಿಎಲ್‌ಬಿಸಿ ಗಳಿಗೆ ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್ ಸಾಲ ನೀಡಿಕೆ ಕುರಿತು ಮಾಸಿಕ ಸಭೆಗಳನ್ನು ನಡೆಸುವಂತೆ ನಿರ್ದೇಶಿಸಲಾಯಿತು. ಅಲ್ಲದೆ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಸಹಯೋಗದೊಂದಿಗೆ ತಿಂಗಳಲ್ಲಿ ಒಂದು ದಿನ ಬ್ಯಾಂಕ್ ಸಾಲ ಮರುಪಾವತಿ ದಿನವನ್ನು ಆಚರಿಸಲು ಆದೇಶ ನೀಡಲಾಯಿತು. ಈ ಮೂಲಕ ನಿಯಮಿತವಾಗಿ ಸಾಲ ಮರುಪಾವತಿ ಮಾಡದಿರುವ ಸ್ವ ಸಹಾಯ ಗುಂಪುಗಳ ಸಾಲ ಮರುಪಾವತಿಯನ್ನು ನಿಯಮಿತವಾಗಿ ಮಾಡಿದಂತಾಗುತ್ತದೆ.

**ಲೀಡ್ ಡಿಸ್ಟ್ರಿಕ್ಟ್ ಮ್ಯಾನೇಜರ್ಸ್ ಸಭೆ:**

ರಾಜ್ಯ ಮಟ್ಟದಲ್ಲಿ ಎಲ್‌ಡಿಎಮ್ಸ್‌ಗಳ ಸಭೆಯನ್ನು ನಡೆಸಲಾಗಿದ್ದು, ನಿಯಮಿತವಾಗಿ ಜಿಲ್ಲಾ ಮಟ್ಟದಲ್ಲಿ ಡಿಎಲ್‌ಬಿಸಿ ಮತ್ತು ತಾಲ್ಲೂಕು ಮಟ್ಟದಲ್ಲಿ ಬಿಎಲ್‌ಬಿಸಿ ಸಭೆಗಳನ್ನು ಪರಿಣಾಮಕಾರಿಯಾಗಿ ನಡೆಸಲಾಗುತ್ತಿದೆ. ಎಸ್‌ಎಚ್‌ಜಿ ಬ್ಯಾಂಕ್

ಲಿಂಕೇಜ್ ಮತ್ತು ಬಡ್ಡಿ ಸಹಾಯ ಧನ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವಲ್ಲಿ ಅವರುಗಳ ಭಾಗವಹಿಸುವಿಕೆ ಕುರಿತು ಚರ್ಚಿಸಲಾಗಿರುತ್ತದೆ. ಎಸ್‌ಎಚ್‌ಜಿ ಬ್ಯಾಂಕ್ ಲಿಕೇಂಜ್‌ನಲ್ಲಿ ಗುರಿಯನ್ನು ಸಾಧಿಸಲು ಅವರುಗಳ ಕಾರ್ಯ ಮತ್ತು ಪ್ರಗತಿಯನ್ನು ಪಟ್ಟಿ ಮಾಡಿ ನೀಡಲಾಗಿರುತ್ತದೆ.

**ಸರ್ಕಾರೇತರ ಸಂಸ್ಥೆಗಳೊಂದಿಗೆ ಸಭೆ ನಡೆಸುವುದು:**

ಎಸ್‌ಎಚ್‌ಜಿ ಬ್ಯಾಂಕ್ ಲಿಂಕೇಜ್ ಮತ್ತು ಬಡ್ಡಿ ಸಹಾಯಧನ ಸೌಲಭ್ಯದ ಕುರಿತಾದ ಗುರಿ ಸಾಧನೆಯಲ್ಲಿ ಎನ್‌ಜಿಓಗಳ ಸಹಕಾರ ಕುರಿತು ಎರಡು ಸಭೆಗಳನ್ನು ನಡೆಸಲಾಗಿರುತ್ತದೆ. ಮುಂದುವರೆದು, ಎನ್‌ಜಿಓ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಎಸ್‌ಕೆಡಿಆರ್‌ಡಿಪಿ ಸಂಸ್ಥೆಯೊಂದಿಗೆ ಮೂರು ಸಭೆಗಳನ್ನು ನಡೆಸಲಾಗಿರುತ್ತದೆ. ಈ ಸಭೆಗಳಲ್ಲಿ, ಕ್ಷೇತ್ರಮಟ್ಟದಲ್ಲಿ ಸ್ವಸಹಾಯ ಗುಂಪುಗಳ ರಚನೆ, ಬ್ಯಾಂಕ್ ಸಂಪರ್ಕ ಮತ್ತು ಬಡ್ಡಿ ಸಹಾಯಧನ ಸೌಲಭ್ಯಗಳ ಯಶಸ್ವಿ ಅನುಷ್ಠಾನ ಕುರಿತು ಚರ್ಚಿಸಲಾಗಿರುತ್ತದೆ. ಎನ್‌ಜಿಓಗಳು ಮತ್ತು ಎಸ್‌ಕೆಡಿಆರ್‌ಡಿಪಿ ಸಂಸ್ಥೆಗಳು ಎಸ್‌ಎಚ್‌ಜಿ ಬ್ಯಾಂಕ್ ಲಿಂಕೇಜ್ ರಂಗದಲ್ಲಿ ಮುಖ್ಯ ಪಾತ್ರವನ್ನು ನಿರ್ವಹಿಸುತ್ತಿವೆ. ಎಸ್‌ಕೆಡಿಆರ್‌ಡಿಪಿ ಸಂಸ್ಥೆಯು ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್‌ಗಳಿಂದಲೇ ನೇರವಾಗಿ ಸಾಲ ಒದಗಿಸುವ ಪ್ರಕ್ರಿಯೆಗೆ ಚಾಲನೆ ನೀಡುತ್ತಿದೆ. ಇದರಿಂದಾಗಿ ಆ ಸ್ವಸಹಾಯ ಗುಂಪುಗಳಿಗೆ ಬಡ್ಡಿ ಸಹಾಯಧನ ಸೌಲಭ್ಯವು ದೊರೆತಂತಾಗಿದೆ.

**ಖಾಸಗಿ ಬ್ಯಾಂಕ್‌ಗಳೊಂದಿಗಿನ ಸಭೆ:**

ಖಾಸಗಿ ಬ್ಯಾಂಕ್‌ಗಳೊಂದಿಗೆ ಒಂದು ಸಭೆಯನ್ನು ನಡೆಸಲಾಗಿದ್ದು, ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್ ಸಂಪರ್ಕ ಕಲ್ಪಿಸಲು ಮತ್ತು ಬಡ್ಡಿ ಸಹಾಯಧನ ಸೌಲಭ್ಯವನ್ನು ಉಪಯೋಗಿಸಿಕೊಳ್ಳುವಂತೆ ಸಹಕಾರ ಕೋರಲಾಗಿರುತ್ತದೆ.

**ಸ್ವ ಸಹಾಯ ಗುಂಪುಗಳಿಗೆ ಸುತ್ತು ನಿಧಿಯ ಹಂಚಿಕೆ:**

ಸುತ್ತುನಿಧಿ ಎಂಬುವುದು ಒಮ್ಮೆ ಮಾತ್ರ ಯೋಜನೆಯ ವತಿಯಿಂದ ಸ್ವ ಸಹಾಯ ಗುಂಪುಗಳಿಗೆ ನೀಡುವ ಅನುದಾನವಾಗಿದೆ. ಈ ಅನುದಾನದ ಮೊತ್ತವು ಸ್ವ ಸಹಾಯ ಗುಂಪಿನಲ್ಲಿ ಸದಸ್ಯರ ಉಳಿತಾಯದ ಹಣದೊಂದಿಗೆ ಸೇರಿ, ಒಟ್ಟು ಬಂಡವಾಳನ್ನು ಹೆಚ್ಚಿಸುವುದು ಮತ್ತು ಸ್ವ ಸಹಾಯ ಗುಂಪುಗಳು ಹೆಚ್ಚಿನ ಪ್ರಮಾಣದಲ್ಲಿ ಬ್ಯಾಂಕ್‌ಗಳಿಂದ ಸಾಲ ಪಡೆಯಲು ಅನುಕೂಲವಾಗಿದೆ. ಅಲ್ಲದೇ ಸ್ವ ಸಹಾಯ ಗುಂಪಿನ ಸದಸ್ಯರ ಸಾಲ ಮರುಪಾವತಿ ಶಿಸ್ತನ್ನು ರೂಪಿಸಿ, ಬ್ಯಾಂಕ್‌ಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಸಾಲ ಪಡೆಯಲು ಸಹಕಾರಿಯಾಗಿದೆ. ಅರ್ಹ ಸ್ವ ಸಹಾಯ ಗುಂಪುಗಳನ್ನು ಗುರುತಿಸಲು ಜಿಲ್ಲೆಗಳಿಗೆ ಗುರಿಯನ್ನು ನಿಗದಿಪಡಿಸಲಾಗುತ್ತದೆ. ಯೋಜನಾ ಮಾರ್ಗಸೂಚಿಯಂತೆ ಆಯ್ಕೆ ಮಾಡಿ ಸಲ್ಲಿಸಲಾದ ಪ್ರಸ್ತಾವನೆಯಲ್ಲಿನ ಸ್ವಸಹಾಯ ಗುಂಪುಗಳಿಗೆ ಸುತ್ತುನಿಧಿಯನ್ನು ನೀಡಲಾಗುತ್ತಿದೆ. 2016–17ನೇ ಸಾಲಿನಲ್ಲಿ 1760 ಸ್ವ ಸಹಾಯ ಗುಂಪುಗಳಿಗೆ ರೂ. 2.64 ಕೋಟಿ ಸುತ್ತುನಿಧಿಯನ್ನು ನೀಡಲಾಗಿದೆ.

**ಸಮುದಾಯ ಬಂಡವಾಳ ನಿಧಿ(ಸಿ.ಐ.ಎಫ್):**

ಸಂಜೀವಿನಿಯು ಒಕ್ಕೂಟಗಳಿಗೆ ಸಮುದಾಯ ಬಂಡವಾಳ ನಿಧಿ ಅನುದಾನವನ್ನು ನೀಡುತ್ತಿದ್ದು, ಇದು ಒಕ್ಕೂಟಗಳ ಸದಸ್ಯರು ತಯಾರಿಸುವ ಕಿರು ಬಂಡವಾಳ ಹೂಡಿಕೆ ಯೋಜನೆಯನ್ನು ಆಧರಿಸಿದೆ. ಹೀಗೆ ನೀಡಲಾಗುವ ಸಮುದಾಯ ಬಂಡವಾಳ ನಿಧಿಯನ್ನು ಒಕ್ಕೂಟಗಳು ಸ್ವ ಸಹಾಯ ಸಂಘಗಳಿಗೆ ಸಾಲ ರೂಪದಲ್ಲಿ ನೀಡುತ್ತವೆ. ಸ್ವ ಸಹಾಯ ಗಂಪುಗಳು ಸದಸ್ಯರಿಗೆ ಸಾಲ ನೀಡುತ್ತವೆ. ಈ ರೀತಿ ಪಡೆದ ಸಾಲವನ್ನು ಸ್ವ ಸಹಾಯ ಗುಂಪಿನ ಸದಸ್ಯರು ಸ್ವ/ಕುಟುಂಬದ ಪೋಷಣೆ ಮತ್ತು ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ತೊಡಗಿಸಿಕೊಳ್ಳುವರು. ರಾಜ್ಯದಲ್ಲಿ ಮೊದಲ ಬಾರಿಗೆ ವಾರ್ಡ್/ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳು ಮತ್ತು ಸಮುದಾಯ ಬಂಡವಾಳ ನಿಧಿ(ಸಿ.ಐ.ಎಫ್) ಕಲ್ಪನೆಯನ್ನು ಸಂಜೀವಿನಿ ಸಂಸ್ಥೆಯು ಪರಿಚಯಿಸಿದೆ.

**2016–17ನೇ ಸಾಲಿನಲ್ಲಿ ಹಣಕಾಸು ಸೇರ್ಪಡೆಯ ಪ್ರಗತಿ ವಿವರ**

| ಘಟಕ | (ರೂ. ಲಕ್ಷಗಳಲ್ಲಿ) | | | |
|---|---|---|---|---|
| | **ಗುರಿ** | | **ಸಾಧನೆ** | |
| | **ಭೌತಿಕ** | **ಆರ್ಥಿಕ** | **ಭೌತಿಕ** | **ಆರ್ಥಿಕ** |
| ಸುತ್ತುನಿಧಿ | 1760 | 264 | 1760 | 264 |
| ಸಮುದಾಯ ಬಂಡವಾಳ ನಿಧಿ | 2530 | 2535 | 792 | 792 |
| ಬ್ಯಾಂಕ್ ಲಿಂಕೇಜ್ | **230000** | **500000** | **215608** | **547147.62** |

**ಹಣಕಾಸು ಶಾಖೆ:**

**2016–17ನೇ ಸಾಲಿನ ಆರ್ಥಿಕ ವೆಚ್ಚದ ವಿವರ**

**(ರೂ.ಲಕ್ಷಗಳಲ್ಲಿ)**

| | | |
|---|---|---|
| 2016–17 | ಆಡಳಿತಾತ್ಮಕ ವೆಚ್ಚ | 1218.05 |
| | ಕ್ಷೇತ್ರ ಭೇಟಿ | 26.46 |
| | ಇತರೆ ವೆಚ್ಚ | 9836.79 |
| | **ಒಟ್ಟು ವೆಚ್ಚ** | **11081.30** |

**(ರೂ.ಲಕ್ಷಗಳಲ್ಲಿ)**

| ವರ್ಷ | ವಿವರ | ಎನ್‌ಆರ್‌ಎಲ್‌ಪಿ | ಎನ್‌ಆರ್‌ಎಲ್‌ಎಂ | ಎಂಕೆಎಸ್‌ಪಿ | ಕೇಂದ್ರ ಬಡ್ಡಿ ಸಹಾಯಧನ | ರಾಜ್ಯ ಬಡ್ಡಿ ಸಹಾಯಧನ | ಆರ್‌ಸೆಟಿ | ಆಜೀವಿಕಾ ಸ್ಕಿಲ್ಸ್ | ಆರ್.ಜಿ.ಸಿ.ವೈ | ಒಟ್ಟು |
|---|---|---|---|---|---|---|---|---|---|---|
| 2016–17 | ಆಡಳಿತಾತ್ಮಕ ವೆಚ್ಚ | 698.63 | 151.90 | | | | | 106.32 | 261.20 | 1218.05 |
| | ಕ್ಷೇತ್ರ ಭೇಟಿ | 21.03 | 5.43 | | | | | | | 26.46 |
| | ಇತರೆ ವೆಚ್ಚ | 1668.34 | 1195.97 | | | | 149.00 | 1806.68 | 5016.80 | 9836.79 |
| | **ಒಟ್ಟು ವೆಚ್ಚ** | **2388.00** | **1353.30** | | | | **149.00** | **1913.00** | **5278.00** | **11081.30** |

**ರಾಜೀವ್ ಗಾಂಧಿ ಚೈತನ್ಯ ಯೋಜನೆ:**

ರಾಜೀವ್ ಗಾಂಧಿ ಚೈತನ್ಯ ಯೋಜನೆಯು ರಾಜ್ಯ ಸರ್ಕಾರದ ಯೋಜನೆಯಾಗಿದ್ದು, 2013–14ನೇ ಸಾಲಿನಿಂದ ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿದೆ. 2014–15 ನೇ ಸಾಲಿನಲ್ಲಿ 18 ರಿಂದ 35 ವರ್ಷದ ವರೆಗಿನ 8ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುವ ನಿರುದ್ಯೋಗಿ ಯುವ ಜನರನ್ನು ಪ್ರತಿ ಗ್ರಾಮ ಪಂಚಾಯತಿಗೆ 40 ರಂತೆ ರಾಜ್ಯದಲ್ಲಿ ಒಟ್ಟು 2 ಲಕ್ಷ ಯುವ ಜನರನ್ನು ಆಯ್ಕೆ ಮಾಡಲು ಉದ್ದೇಶಿಸಲಾಗಿತ್ತು. ಅದರಲ್ಲಿ 1 ಲಕ್ಷ ಗ್ರಾಮೀಣ ನಿರುದ್ಯೋಗಿ ಯುವಜನತೆಗೆ ಸ್ವ–ಉದ್ಯೋಗ ಹಾಗೂ 1 ಲಕ್ಷ ನಿರುದ್ಯೋಗಿ ಯುವಜನತೆಗೆ ವೃತ್ತಿಪರ ಕೌಶಲ್ಯದೊಂದಿಗೆ ಉದ್ಯೋಗ ಕಲ್ಪಿಸುವ ಗುರಿ ಹೊಂದಲಾಗಿತ್ತು.

ಅಭ್ಯರ್ಥಿಗಳ ಆಯ್ಕೆಯಲ್ಲಿ ಸರ್ಕಾರದ ಮೀಸಲಾತಿ ನಿಯಮಾವಳಿಗಳಂತೆ ಕನಿಷ್ಠ ಶೇ.20% ಪರಿಶಿಷ್ಠ ಜಾತಿ ಹಾಗು ಶೇ.9% ಪರಿಶಿಷ್ಠ ಪಂಗಡದ ಯುವಜನರನ್ನು ಆಯ್ಕೆ ಮಾಡಿಕೊಳ್ಳುವುದು, ಮಹಿಳೆಯರಿಗೆ ಮತ್ತು ಅಲ್ಪಸಂಖ್ಯಾತರಿಗೆ ಆಧ್ಯತೆ ನೀಡಲಾಗುವುದು ಹಾಗೂ ವಿಕಲಚೇತನರು, ಬುಡಕಟ್ಟು ಜನಾಂಗದ ಯುವ ಜನರು, ಲೈಂಗಿಕ ಶೋಷಣೆಗೊಳಗಾದ ಮಹಿಳೆಯರು, ವಿಧವೆಯರು, ಪರಿತ್ಯಕ್ತ ಮಹಿಳೆಯರು, ಮಂಗಳಮುಖಿಯರು (ಟ್ರಾನ್ಸ್‌ಜೆಂಡರ್), ಬಿಡುಗಡೆಗೊಂಡ ಎಲ್ಲಾ ಜೀತ ವಿಮುಕ್ತರು, ಎಂಜಿಎನ್‌ಆರ್‌ಇಜಿಎ ಯಡಿ 100 ದಿನ ಉದ್ಯೋಗ ಪೂರೈಸಿದ ಯುವ ಜನರು ಇವರುಗಳನ್ನು ಸ್ವಯಂ ಸೇರ್ಪಡೆ (Auto inclusion) ಹೊಂದುವುದು. ಇವರಿಗೆ ಗ್ರಾಮ ಸಭೆಯ ಆಯ್ಕೆ ಕಡ್ಡಾಯವಾಗಿರುವುದಿಲ್ಲ.

2015–16 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ, 2016–17 ನೇ ಸಾಲಿನಲ್ಲಿ ಸ್ವ–ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿಯೊಂದಿಗೆ ಉದ್ಯೋಗ ಕಲ್ಪಿಸುವಿಕೆಗಾಗಿ ಪ್ರತಿ ಗ್ರಾಮ ಪಂಚಾಯತಿಯಿಂದ 50 ರಂತೆ (25+25) ಯುವಕ/ಯುವತಿಯರನ್ನು ಆಯ್ಕೆ ಮಾಡಲು ಗುರಿ ನಿಗದಿಪಡಿಸಲಾಗಿದೆ.

ಅದರಂತೆ 2016–17ನೇ ಸಾಲಿಗೆ ಒಟ್ಟು ಗುರಿ 3,00,000 ಆಗಿದ್ದು, ಮಾರ್ಚ್ 2017ರ ಮಾಹೆಯ ಅಂತ್ಯಕ್ಕೆ 101714 ಅಭ್ಯರ್ಥಿಗಳ ಅರ್ಜಿಗಳನ್ನು ಸಾಲ ಮಂಜೂರಾತಿಗಾಗಿ ವಿವಿಧ ಬ್ಯಾಂಕುಗಳಿಗೆ ಸಲ್ಲಿಸಲಾಗಿದ್ದು, ಅದರಲ್ಲಿ 48098 ಫಲಾನುಭವಿಗಳಿಗೆ ಸಾಲ ಮಂಜೂರಾಗಿದ್ದು ಉದ್ಯಮಶೀಲತಾ ತರಬೇತಿ ಪಡೆದಿರುತ್ತಾರೆ. ಕೌಶಲ್ಯಾಭಿವೃದ್ಧಿ ತರಬೇತಿಯೊಂದಿಗೆ ಉದ್ಯೋಗ ಕಲ್ಪಿಸುವ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ 3558 ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಲಾಗಿದ್ದು ಅದರಲ್ಲಿ 1622 ಅಭ್ಯರ್ಥಿಗಳಿಗೆ ಉದ್ಯೋಗ ಒದಗಿಸಲಾಗಿದೆ.

ಆಯ್ಕೆಯಾದ ಫಲಾನುಭವಿಗಳಿಗೆ ಸ್ವ–ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿ ವೃತ್ತಿ ತರಬೇತಿ ಆಧಾರಿತ ಉದ್ಯೋಗಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡಲಾಗುತ್ತದೆ. ಸ್ವ–ಉದ್ಯೋಗ ಕಾರ್ಯಕ್ರಮ ಅನುಷ್ಠಾನಗೊಳಿಸಲು 30 ಜಿಲ್ಲೆಗಳಲ್ಲಿ ಯೋಜನಾ ಬೆಂಬಲ ಸಂಸ್ಥೆಗಳು ಮತ್ತು ಕೌಶಲ್ಯಾಭಿವೃದ್ಧಿ ವೃತ್ತಿ ತರಬೇತಿ ಆಧಾರಿತ ಉದ್ಯೋಗ ಕಲ್ಪಿಸಲು ಯೋಜನಾ ಅನುಷ್ಠಾನ ಸಂಸ್ಥೆಗಳ ಸೇವೆ ಪಡೆಯಲಾಗಿದ್ದು, ಪ್ರಸ್ತುತ 41 ಯೋಜನಾ ಬೆಂಬಲ ಸಂಸ್ಥೆಗಳು ಮತ್ತು 11 ಯೋಜನಾ ಅನುಷ್ಠಾನ ಸಂಸ್ಥೆಗಳು ರಾಜೀವ್ ಗಾಂಧಿ ಚೈತನ್ಯ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿವೆ. ಸ್ವ–ಉದ್ಯೋಗ ಆಯ್ಕೆ ಮಾಡಿಕೊಂಡಿರುವ ಫಲಾನುಭವಿಗಳಿಗೆ ಮಾರ್ಗದರ್ಶನ ನೀಡಲು ಅನುವಾಗುವಂತೆ ಯೋಜನಾ ಬೆಂಬಲ ಸಂಸ್ಥೆಯ ಪ್ರತಿನಿಧಿಗೆ ಯೋಜನೆಯ ಗುರಿ, ಉದ್ದೇಶಗಳು ಮತ್ತು ಅನುಷ್ಠಾನದ ಬಗ್ಗೆ ತರಬೇತಿಯನ್ನು ನೀಡಲಾಗುತ್ತದೆ, ತರಬೇತಿ ಪಡೆದ ಪ್ರತಿನಿಧಿ ಮಾಸ್ಟರ್ ಟ್ರೈನರ್ ಆಗಿ ಕಾರ್ಯನಿರ್ವಹಿಸಿ ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿಯನ್ನು ನೀಡುತ್ತಾರೆ.

ಸಮುದಾಯ ಸಂಪನ್ಮೂಲ ವ್ಯಕ್ತಿಗಳು ಜಂಟಿ ಬಾಧ್ಯತಾ ಗುಂಪುಗಳನ್ನು (ಜೆಎಲ್‌ಜಿ) ರಚಿಸಿ ಅವುಗಳ ಯೋಜನಾ ವರದಿಯನ್ನು ತಯಾರಿಸಿ ಅವಶ್ಯವಿರುವ ಎಲ್ಲಾ ದಾಖಲೆಗಳೊಂದಿಗೆ ಸಾಲ ಮಂಜೂರಾತಿಗಾಗಿ ಬ್ಯಾಂಕಿಗೆ ಸಲ್ಲಿಸಿ, ಜಂಟಿ ಬಾದ್ಯತಾ ಗುಂಪು ಮತ್ತು ವೈಯಕ್ತಿಕ ಫಲಾನುಭವಿಗಳ ಘಟಕ ಸ್ಥಾಪನೆಯಾಗುವವರೆಗೂ ಮಾರ್ಗದರ್ಶನ ನೀಡುತ್ತಾರೆ.

ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಬಗ್ಗೆ ರಾಜ್ಯದ ಆರ್‌ಸೆಟಿ/ರೂಡ್‌ಸೆಟಿ ನಿರ್ದೇಶಕರು, ಜಿಲ್ಲಾ ಪಂಚಾಯತಿಯ ಯೋಜನಾ ನಿರ್ದೇಶಕರುಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿಯ ಕಾರ್ಯದರ್ಶಿಗಳು, ಇತರೆ ಅನುಷ್ಠಾನ ಇಲಾಖೆ ಮತ್ತು ಬ್ಯಾಂಕ್ ಸಿಬ್ಬಂದಿಗಳಿಗೆ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಬಗ್ಗೆ ಆರ್‌ಸೆಟಿ/ರೂಡ್‌ಸೆಟಿ ಗಳ ಮೂಲಕ ತರಬೇತಿ ನೀಡಿ ಅರಿವು ಮೂಡಿಸಲಾಗುತ್ತಿದೆ.

ಯೋಜನೆಯ ಬಗ್ಗೆ ಫಲಾನುಭವಿಗಳು ಮತ್ತು ತರಬೇತುದಾರರಿಗೆ ಸಂಪೂರ್ಣ ಮಾಹಿತಿ ಒದಗಿಸಲು ಮಾಹಿತಿ ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮದಡಿ "ತರಬೇತಿ ಕೈಪಿಡಿ" ಮತ್ತು "ನಮ್ಮ ಪುಸ್ತಕ" ಗಳನ್ನು ಮುದ್ರಿಸಿ ಸರಬರಾಜು ಮಾಡಲಾಗಿದೆ. ಕೌಶಲ್ಯಾಭಿವೃದ್ದಿ ವೃತ್ತಿ ತರಬೇತಿ ಆಧಾರಿತ ಉದ್ಯೋಗಕ್ಕೆ ಸಂಬಂಧಿಸಿದಂತೆ ಈಗಾಗಲೇ ಗದಗ, ಕೊಪ್ಪಳ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿದೆ. ಉದ್ಯೋಗ ಮೇಳದಲ್ಲಿ ಫಲಾನುಭವಿಗಳು ವಿವಿಧ ಯೋಜನಾ ಅನುಷ್ಠಾನ ಸಂಸ್ಥೆಗಳನ್ನು ನೇರವಾಗಿ ಭೇಟಿ ಮಾಡಿ ತಮಗೆ ಇಚ್ಛೆ ಇರುವ ಟ್ರೇಡ್ ಆಯ್ಕೆ ಮಾಡಿಕೊಳ್ಳಲು ಅನುಕೂಲವಾಗುತ್ತದೆ.

ಸ್ವ–ಉದ್ಯೋಗದಡಿ ಸಾಲ ಮಂಜೂರಾತಿಯ ಕುರಿತ ಪ್ರಗತಿ ಮಾಹಿತಿಯನ್ನು ಈ ಕೆಳಗೆ ನೀಡಲಾಗಿದೆ, ಸಾಲ ಮಂಜೂರಾತಿಯಾದ ಫಲಾನುಭವಿಗಳು ಉದ್ಯಮಶೀಲತಾ ತರಬೇತಿಯನ್ನು ಪಡೆದು ಸ್ವ–ಉದ್ಯೋಗ ಘಟಕಗಳನ್ನು ಸ್ಥಾಪಿಸುತ್ತಾರೆ.

**ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ ಸ್ವ–ಉದ್ಯೋಗದ ಕಾರ್ಯಕ್ರಮದ ಪ್ರಗತಿ ವಿವರ**

| ಕ್ರ ಸಂ | ಜಿಲ್ಲಾ ಪಂಚಾಯತಿಯ ಹೆಸರು | ಭೌತಿಕ ಗುರಿ | ಸಾಲ ಮಂಜೂರಾದ ಮತ್ತು ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ |
|---|---|---|---|
| 1 | ಬಾಗಲಕೋಟೆ | 5048 | 640 |
| 2 | ಬೆಂಗಳೂರು(ಗ್ರಾ) | 2598 | 195 |
| 3 | ಬೆಂಗಳೂರು(ನ) | 2425 | 307 |
| 4 | ಬೆಳಗಾಂ | 12793 | 3568 |
| 5 | ಬಳ್ಳಾರಿ | 5048 | 2069 |
| 6 | ಬೀದರ್ | 4479 | 0 |
| 7 | ಬಿಜಾಪುರ | 5394 | 819 |
| 8 | ಚಾಮರಾಜನಗರ | 3241 | 1283 |
| 9 | ಚಿಕ್ಕಬಳ್ಳಾಪುರ | 3885 | 891 |
| 10 | ಚಿಕ್ಕಮಗಳೂರು | 5617 | 648 |
| 11 | ಚಿತ್ರದುರ್ಗ | 4701 | 600 |
| 12 | ದಕ್ಷಿಣ ಕನ್ನಡ | 5741 | 207 |
| 13 | ದಾವಣಗೆರೆ | 5815 | 13 |
| 14 | ಧಾರವಾಡ | 3538 | 254 |
| 15 | ಗದಗ | 2994 | 918 |
| 16 | ಗುಲ್ಬರ್ಗ | 6508 | 0 |
| 17 | ಹಾಸನ | 6582 | 1182 |
| 18 | ಹಾವೇರಿ | 5320 | 113 |
| 19 | ಕೊಡಗು | 2573 | 222 |
| 20 | ಕೋಲಾರ | 3860 | 526 |
| 21 | ಕೊಪ್ಪಳ | 3885 | 0 |
| 22 | ಮಂಡ್ಯ | 5790 | 3904 |
| 23 | ಮೈಸೂರು | 6631 | 982 |
| 24 | ರಾಮನಗರ | 3217 | 641 |
| 25 | ರಾಯಚೂರು | 4578 | 1644 |
| 26 | ಶಿವಮೊಗ್ಗ | 6706 | 550 |
| 27 | ತುಮಕೂರು | 8190 | 888 |
| 28 | ಉಡುಪಿ | 4009 | 35 |
| 29 | ಉತ್ತರ ಕನ್ನಡ | 5741 | 1373 |
| 30 | ಯಾದಗಿರಿ | 3093 | 0 |

| ಕ್ರ ಸಂ | ಜಿಲ್ಲಾ ಪಂಚಾಯತಿಯ ಹೆಸರು | ಭೌತಿಕ ಗುರಿ | ಸಾಲ ಮಂಜೂರಾದ ಮತ್ತು ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ |
|---|---|---|---|
| ಒಟ್ಟು | | 150000 | 24472 |

**ಗ್ರಾಮೀಣ ಸ್ವ ಉದ್ದಿಮೆ ತರಬೇತಿ ಕೇಂದ್ರಗಳು (ಆರ್‌ಸೆಟಿ):**

ಆರ್‌ಸೆಟಿ ಕೇಂದ್ರಗಳು ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗಿ ಯುವಕ–ಯುವತಿಯರಿಗೆ ಸ್ವ ಉದ್ಯೋಗ ಕುರಿತು ವಿವಿಧ ರೀತಿಯ ತರಬೇತಿ ನೀಡುತ್ತಿರುವ ಕೇಂದ್ರಗಳಾಗಿವೆ. ರಾಜ್ಯದಲ್ಲಿನ 29 ಜಿಲ್ಲೆಗಳಲ್ಲಿ ಪ್ರಸ್ತುತ 33 ತರಬೇತಿ ಕೇಂದ್ರಗಳಿದ್ದು, ಅವಶ್ಯಕವಾದ ಎಲ್ಲಾ ಸೌಕರ್ಯಗಳು ಮತ್ತು ಮಾನವ ಸಂಪನ್ಮೂಲವನ್ನು ಹೊಂದಿವೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಸುಮಾರು 112 ವಿವಿಧ ರೀತಿಯ ತರಬೇತಿಗಳನ್ನು ನೀಡಲಾಗುತ್ತಿದೆ.

| ಆರ್‌ಸೆಟಿ ಸಂಸ್ಥೆಗಳಲ್ಲಿ 2016–17ನೇ ಸಾಲಿನ ಪ್ರಗತಿ ವಿವರ | |
|---|---|
| ಒಟ್ಟು ಗುರಿ | 21900 |
| ಒಟ್ಟು ತರಬೇತಿ ಪಡೆದ ಅಭ್ಯರ್ಥಿಗಳು | 34505 |
| ಒಟ್ಟು ಬಿ.ಪಿ.ಎಲ್ ಅಭ್ಯರ್ಥಿಗಳು | 27364 |
| ಒಟ್ಟು ಪ.ಜಾ ಅಭ್ಯರ್ಥಿಗಳು | 8953 |
| ಒಟ್ಟು ಪ.ಪಂ ಅಭ್ಯರ್ಥಿಗಳು | 3170 |
| ಒಟ್ಟು ಅಲ್ಪಸಂಖ್ಯಾತ ಅಭ್ಯರ್ಥಿಗಳು | 2580 |
| ಒಟ್ಟು ಮಹಿಳಾ ಅಭ್ಯರ್ಥಿಗಳು | 16193 |
| ಒಟ್ಟು ಬ್ಯಾಂಕ್ ಸಾಲ ನೆರವು ಪಡೆದ ಅಭ್ಯರ್ಥಿಗಳು | 8343 |
| ಒಟ್ಟು ಸ್ವಂತ ಬಂಡವಾಳ ತೊಡಗಿಸಿದ ಅಭ್ಯರ್ಥಿಗಳು | 4016 |
| ಉದ್ಯೋಗ ರೂಪಿಸಿದ ಅಭ್ಯರ್ಥಿಗಳು | 699 |
| ಮುಂಗಡ ಆಯವ್ಯಯ (ರೂ. ಕೋಟಿಗಳಲ್ಲಿ) | 7.26 |
| ಒಟ್ಟು ಖರ್ಚು (ರೂ. ಕೋಟಿಗಳಲ್ಲಿ) | 1.85 |

**ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಡಿಡಿಯು–ಜಿಕೆವೈ):**

ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಯಾಗಿದ್ದು, ಈ ಯೋಜನೆಯನ್ನು **"ಆಜೀವಿಕಾ ಕೌಶಲ್ಯಾಭಿವೃದ್ಧಿ ಯೋಜನೆ"** ಎಂದು ಪ್ರಾರಂಭ ಮಾಡಿದ್ದು, ಕೇಂದ್ರ ಸರ್ಕಾರದ ಸುತ್ತೋಲೆಯಂತೆ **"ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ"** ಎಂದು ಮರುನಾಮಕರಣ ಮಾಡಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕೆ ಯೋಜನಾ ಅನುಷ್ಠಾನ ಸಂಸ್ಥೆಗಳನ್ನು ಗುರುತಿಸಲಾಗಿದ್ದು, ಅವುಗಳ ಸಹಯೋಗದೊಂದಿಗೆ ಕೌಶಲ್ಯವನ್ನು ಅಭಿವೃದ್ಧಿಪಡಿಸಲು ತರಬೇತಿ ನೀಡಿ ಉದ್ಯೋಗಾವಕಾಶ ಕಲ್ಪಿಸಲಾಗುತ್ತಿದೆ.

**ಪ್ರಗತಿ ವಿವರ:**

ಕರ್ನಾಟಕ ರಾಜ್ಯವು ಎ.ಎ.ಪಿ ರಾಜ್ಯವಾಗಿರುವುದರಿಂದ ಈಗಾಗಲೇ ಕ್ರಿಯಾ ಯೋಜನೆಯ ಪ್ರಕಾರ ಅನುಷ್ಠಾನಗೊಳಿಸಲಾಗುತ್ತಿದ್ದು, ಇದುವರೆಗೂ 31 ಯೋಜನಾ ಅನುಷ್ಠಾನ ಸಂಸ್ಥೆಗಳೊಂದಿಗೆ ಒಡಂಬಡಿಕೆ (ಎಂ.ಒ.ಯು)

ಮಾಡಿಕೊಂಡಿದ್ದು, ಆ ಪ್ರಕಾರವಾಗಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಒಟ್ಟು 31 ಯೋಜನಾ ಅನುಷ್ಠಾನ ಸಂಸ್ಥೆಗಳಲ್ಲಿ 22 ಯೋಜನಾ ಅನುಷ್ಠಾನ ಸಂಸ್ಥೆಗಳು ಮಾತ್ರ ಸಕ್ರಿಯವಾಗಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿವೆ.

ವಿಶ್ಲೇಷಣೆಯ ಪ್ರಕಾರ ಎಲ್ಲಾ ಜಿಲ್ಲೆಗಳಲ್ಲಿಯೂ ಯೋಜನಾ ಅನುಷ್ಠಾನ ಸಂಸ್ಥೆಗಳು ಇದ್ದು, ಕೆಲವೊಂದು ಜಿಲ್ಲೆಗಳಲ್ಲಿ ಕಡಿಮೆ ಸಂಖ್ಯೆಯ ಸಂಸ್ಥೆಗಳಿವೆ. ನಾಲ್ಕು ಜಿಲ್ಲೆಗಳಲ್ಲಿ ತುಂಬಾ ಕಡಿಮೆ ಸಂಖ್ಯೆಯ ಯೋಜನಾ ಅನುಷ್ಠಾನ ಸಂಸ್ಥೆಗಳಿವೆ.

ಕರ್ನಾಟಕ ರಾಜ್ಯದಲ್ಲಿ ಸದರಿ ಯೋಜನೆಯಲ್ಲಿ 2012–13 ಮತ್ತು 2014–15ರಲ್ಲಿ 43 ಪ್ರಸ್ತಾವನೆಗಳನ್ನು ಸಲ್ಲಿಸಿದ್ದು, 31 ಸಂಸ್ಥೆಗಳಿಂದ 1,18,173 ಗ್ರಾಮೀಣ ಪ್ರದೇಶದ ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ ಕೊಟ್ಟು ಉದ್ಯೋಗ ಒದಗಿಸುವ ಗುರಿಯನ್ನು ಹೊಂದಿದೆ. ಮೊದಲಿಗೆ ಈ ಗುರಿ ಸಾಧಿಸಲು ರೂ.456 ಕೋಟಿ ಕೇಂದ್ರ/ರಾಜ್ಯ ಸರ್ಕಾರಗಳ ಅನುದಾನವಿದ್ದು ತದನಂತರ ಪರಿಷ್ಕೃತ ದರದ ಪ್ರಕಾರ (ಸಿ.ಎನ್.ಎನ್) ಕಾಸ್ಟ್ ನಾರ್ಮ್ ನೋಟಿಫಿಕೇಷನ್ ಮೂರು ವರ್ಷಗಳಿಗೆ (2016–17 ರಿಂದ 2018–19) ಗುರಿಯು 89,804 ಅಭ್ಯರ್ಥಿಗಳಿಗೆ ಇದ್ದು, ಅನುದಾನ ರೂ.708.25 ಕೋಟಿ ಆಗಿರುತ್ತದೆ. ಇದು ಬೆಂಬಲ ವೆಚ್ಚ ಸೇರಿದಂತೆ ಯೋಜನೆ ಆಗಿದೆ.

31 ಸಂಸ್ಥೆಗಳಲ್ಲಿ 5 ಯೋಜನಾ ಅನುಷ್ಠಾನ ಸಂಸ್ಥೆಗಳು ಅನುಷ್ಠಾನ ಸಾಮರ್ಥ್ಯದಲ್ಲಿ ಗುರಿ ಸಾಧಿಸಲು ಸಾಧ್ಯವಾಗದಿದ್ದರಿಂದ ರದ್ದುಗೊಳಿಸಲಾಗಿದೆ. ಎರಡನೇ ಹಂತದಲ್ಲಿ 16 ಯೋಜನಾ ಅನುಷ್ಠಾನ ಸಂಸ್ಥೆಗಳು ಮಂಜೂರಾಗಿದ್ದು ಅವುಗಳ ಪೈಕಿ 4 ಸಂಸ್ಥೆಗಳು ಆಸಕ್ತಿ ತೋರಿಸದೇ ಎಂಒಯು ಮಾಡಿಕೊಂಡಿರುವುದಿಲ್ಲ. ಒಟ್ಟಿನಲ್ಲಿ 22 ಸಂಸ್ಥೆಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ.

**2016–17ನೇ ಸಾಲಿನ ಪ್ರಗತಿ ವಿವರ**

| ವರ್ಷ | ಯೋಜನಾ ಅನುಷ್ಠಾನ ಸಂಸ್ಥೆಗಳು | ಗುರಿ | ತರಬೇತಿ ಮತ್ತು ಉದ್ಯೋಗ ದೊರಕಿಸಿರುವುದು (ಮಾರ್ಚ್ 2017ರವರೆಗೆ) | | |
|---|---|---|---|---|---|
| | | | Mobilized & enrolled | ತರಬೇತಿ | ಉದ್ಯೋಗ ದೊರಕಿಸಿರುವುದು |
| **2016 – 17** | **22** | **30,000** | **27699** | **21825** | **13879** |
| 2017 – 18 | 22 + 15 | 30,000 | | | |
| 2018 – 19 | 22 + 15 + 8 | 29,804 | | | |
| **ಒಟ್ಟು** | **45** | **89,804** | | | |

**ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದಿಂದ ಅನುಮೋದಿತವಾಗಿರುವ ಯೋಜನಾ ಅನುಷ್ಠಾನ ಸಂಸ್ಥೆಗಳ ಕ್ರೋಢೀಕೃತ ಮಾಹಿತಿ (2015–16 ಮತ್ತು 2016–17)**

2016–17ನೇ ಸಾಲಿನಲ್ಲಿ ಮಾರ್ಚ್ 2017ರ ಅಂತ್ಯಕ್ಕೆ 13879 ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿಯೊಂದಿಗೆ ಉದ್ಯೋಗ ಕಲ್ಪಿಸಲಾಗಿದೆ. ಆದರೆ, ಮೂರು ತಿಂಗಳ ಕೋರ್ಸ್‌ಗಳು ಮಾತ್ರ ಇದ್ದು ಈಗ ಆರು, ಒಂಭತ್ತು ಮತ್ತು ಹನ್ನೆರೆಡು ತಿಂಗಳ ಟ್ರೇಡ್ಸ್‌ಗಳಲ್ಲಿ ಗಮನಹರಿಸಲು ಎರಡು ವರ್ಷಗಳಲ್ಲಿ ಯೋಜಿಸಲಾಗಿದೆ.

ಮಾರ್ಚ್ 2017 ರ ಅಂತ್ಯಕ್ಕೆ ಮೊದಲ ಹಂತದ 22 ಪಿ.ಐ.ಎ ಹಾಗೂ ಎರಡನೇ ಹಂತದ ಪಿ.ಐ.ಎ ಗಳಿಂದ 121 ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರಗಳು ಸ್ಥಾಪನೆಗೊಂಡಿವೆ. ಇವುಗಳಲ್ಲಿ 48 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಉಳಿದ 7 ಪಿ.ಐ.ಎಗಳಲ್ಲಿ ಮೊದಲಿನ ಬ್ಯಾಚ್ ಗಳು ಪೂರ್ಣಗೊಂಡಿದ್ದು ತರಬೇತಿ ಪ್ರಾರಂಭವಾಗಬೇಕಿದೆ.

**ಪರಿವೀಕ್ಷಣೆ ಮತ್ತು ಕ್ಷೇತ್ರ ಭೇಟಿಗಳು**

ಈ ಅವಧಿಯಲ್ಲಿ 22 ಸಂಸ್ಥೆಗಳ 48 ತರಬೇತಿ ಕೇಂದ್ರಗಳಲ್ಲಿ 34 ಕೇಂದ್ರಗಳಿಗೆ ಭೇಟಿ ನೀಡಿದ್ದು 27 ಕೇಂದ್ರಗಳಿಗೆ ತರಬೇತಿಯನ್ನು ನೀಡಲು ಅನುಮತಿಯನ್ನು ನೀಡಲಾಗಿದೆ. ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರು ಹಾಗೂ ಎಸ್.ಐ.ಆರ್.ಡಿ ಅಧಿಕಾರಿಗಳನ್ನು ಒಳಗೊಂಡ ತಂಡವು ಒಟ್ಟು 43 ಕ್ಷೇತ್ರ ಭೇಟಿ ಮತ್ತು ಪರಿವೀಕ್ಷಣೆ ಮಾಡಿದೆ.

**ಪ್ರಚಲಿತ ಸಮಸ್ಯೆಗಳು**

- ಜಿಲ್ಲೆಗಳ ಬೇಡಿಕೆಯಂತೆ ವಿವಿಧ ಕೌಶಲ್ಯಗಳ ಕೋರ್ಸ್ ಅಗತ್ಯವಿದೆ. ಆದರೆ, ನಮ್ಮಲ್ಲಿ ಕಡಿಮೆ ಕೌಶಲ್ಯಗಳ ಕೋರ್ಸ್‌ಗಳಿವೆ.
- ಸಂಪನ್ಮೂಲಗಳನ್ನು ಕ್ರೋಢೀಕರಿಸುವಲ್ಲಿ ಎಂಐಎಸ್‌ನಲ್ಲಿನ ಸಮಸ್ಯೆಗಳು.
- ಕಾರ್ಮಿಕ ಮಾರುಕಟ್ಟೆಯ ಮಾಹಿತಿ ಪದ್ಧತಿಯ ಅಲಭ್ಯತೆ.
- ಸಂಸ್ಥೆಗಳು ತರಬೇತಿ ಕೊಡುವಲ್ಲಿ ಪಠ್ಯಕ್ರಮ, ಸಾಮಾಗ್ರಿ ಮಾರ್ಗಸೂಚಿಯಂತೆ ಅನುಷ್ಠಾನ ಮಾಡಲು ಇನ್ನು ಹೆಚ್ಚಿನ ಸಾಮರ್ಥ್ಯ ಬೇಕಾಗಿರುವುದು.
- ಭಾಗವಹಿಸುವಿಕೆ ಮತ್ತು ಕಲಿಕೆಯಲ್ಲಿ ಹೆಚ್ಚಿನ ಅವಕಾಶಗಳು ಬೇಕಾಗಿರುವುದು.
- ಅಭಿಯಾನದ ರೀತಿಯಲ್ಲಿ ಕೆಲಸ ಮಾಡಲು ಸಿಬ್ಬಂದಿಗಳ ಮತ್ತು ಪೂರಕ ವ್ಯವಸ್ಥೆ ಕೊರತೆ.
- ಕೌಶಲ್ಯ ತರಬೇತಿಗಳ ಗುಣಮಟ್ಟ ಮೌಲ್ಯಮಾಪನದಲ್ಲಿರುವ ತೊಂದರೆಗಳು.

ಒಟ್ಟಾರೆ ಕರ್ನಾಟಕದಲ್ಲಿ 30 ಜಲ್ಲೆಗಳಿಗೂ ಸಾಕಷ್ಟು ತರಬೇತಿ ಕೇಂದ್ರಗಳು ಅಂದರೆ ಪ್ರತಿ ಜಿಲ್ಲೆಗೂ ಕನಿಷ್ಟ 5 ರಿಂದ 10 ಕೇಂದ್ರಗಳಿದ್ದರೆ ಕೌಶಲ್ಯ ಬೇಡಿಕೆಗನುಸಾರವಾಗಿ ಗುರಿ ಸಾಧಿಸಲು ಅನುಕೂಲವಾಗುತ್ತದೆ.

**ಯೋಜನಾ ಅನುಷ್ಠಾನ ಸಂಸ್ಥೆಗಳ ಪ್ರಗತಿ ವಿವರ**

| ಕ್ರ. ಸಂ | ಯೋಜನಾ ಅನುಷ್ಠಾನ ಸಂಸ್ಥೆ | ಪರಿಷ್ಕತ ಗುರಿಗಳು | ಸಕ್ರಿಯವಾಗಿರುವ ತರಬೇತಿ ಕೇಂದ್ರಗಳು | ಮುಚ್ಚಲಾದ ತರಬೇತಿ ಕೇಂದ್ರಗಳು | ಅನುಮೋದಿತ ತರಬೇತಿ ಕೇಂದ್ರಗಳು | ಒಟ್ಟು ದಾಖಲಾದ ಅಭ್ಯರ್ಥಿಗಳು | ಒಟ್ಟು ತರಬೇತಿ ಪೂರ್ಣಗೊಂಡ ಅಭ್ಯರ್ಥಿಗಳ ಸಂಖ್ಯೆ | ತರಬೇತಿ ಪಡೆಯು ತ್ತಿರುವ ಅಭ್ಯರ್ಥಿಗಳ ಸಂಖ್ಯೆ | ಉದ್ಯೋಗ ಅವಕಾಶ ಕಲ್ಪಿಸಲಾದ ಅಭ್ಯರ್ಥಿಗಳ ಸಂಖ್ಯೆ |
|---|---|---|---|---|---|---|---|---|---|
| 1 | ಎಆರ್‌ಟಿಜಿಎಸ್ | 1786 | 3 | 1 | 4 | 1844 | 1686 | 158 | 1438 |
| 2 | ಕ್ವೆಸ್ | 3267 | 4 | 0 | 4 | 2158 | 1743 | 415 | 917 |
| 3 | ಕಾಪ್ಸ್‌ಟನ್ | 943 | 2 | 0 | 0 | 576 | 423 | 153 | 420 |
| 4 | ಲಾರಸ್ | 3043 | 3 | 1 | 4 | 1435 | 1152 | 283 | 671 |
| 5 | ವಜೀರ್ ಅಡ್ವೈಸರ್ | 3680 | 8 | 1 | 9 | 3446 | 2460 | 986 | 2410 |
| 6 | ಐಸಿಎಫ್‌ಸಿ ಸ್ಕಿಲ್ಸ್ | 1206 | 2 | 0 | 2 | 782 | 648 | 134 | 231 |
| 7 | ಇಟ್‌ಕಾಟ್ | 3988 | 0 | 2 | 13 | 1789 | 1623 | 166 | 1005 |
| 8 | ಐವನ್ | 3536 | 4 | 0 | 4 | 2538 | 2088 | 450 | 1584 |
| 9 | ಕಾಫೀ ಡೇ | 1626 | 3 | 0 | 3 | 815 | 572 | 243 | 366 |
| 10 | ಒರಿಯನ್ | 3749 | 5 | 3 | 8 | 3735 | 3340 | 395 | 1961 |
| 11 | ಅಪಿಟ್ಕೋ ಲಿಮಿಟೆಡ್ | 11477 | 22 | 2 | 24 | 4204 | 3571 | 343 | 1567 |
| 12 | ಐಸಿಎ | 2670 | 2 | 0 | 2 | 620 | 367 | 253 | 313 |

| ಕ್ರ. ಸಂ | ಯೋಜನಾ ಅನುಷ್ಠಾನ ಸಂಸ್ಥೆ | ಪರಿಷ್ಕೃತ ಗುರಿಗಳು | ಸಕ್ರಿಯವಾಗಿರುವ ತರಬೇತಿ ಕೇಂದ್ರಗಳು | ಮುಚ್ಚಲಾದ ತರಬೇತಿ ಕೇಂದ್ರಗಳು | ಅನುಮೋದಿತ ತರಬೇತಿ ಕೇಂದ್ರಗಳು | ಒಟ್ಟು ದಾಖಲಾದ ಅಭ್ಯರ್ಥಿಗಳು | ಒಟ್ಟು ತರಬೇತಿ ಪೂರ್ಣಗೊಂಡ ಅಭ್ಯರ್ಥಿಗಳ ಸಂಖ್ಯೆ | ತರಬೇತಿ ಪಡೆಯು ತ್ತಿರುವ ಅಭ್ಯರ್ಥಿಗಳ ಸಂಖ್ಯೆ | ಉದ್ಯೋಗ ಅವಕಾಶ ಕಲ್ಪಿಸಲಾದ ಅಭ್ಯರ್ಥಿಗಳ ಸಂಖ್ಯೆ |
|---|---|---|---|---|---|---|---|---|---|
| 13 | ಫಿಡೆಲಿಸ್ | 1343 | 3 | 0 | 3 | 233 | 183 | 50 | 177 |
| 14 | ಟೀಮ್‌ಲೀಸ್ | 2350 | 2 | 0 | 2 | 731 | 332 | 399 | 37 |
| 15 | ಬಿವಿಜಿ ಇಂಡಿಯಾ | 3490 | 4 | 0 | 4 | 475 | 230 | 245 | 178 |
| 16 | ರೂರಲ್ ಷೋರ್ಸ್ | 2000 | 2 | 0 | 2 | 327 | 227 | 100 | 227 |
| 17 | ಟಿಟಿಐ ಗ್ಲೋಬಲ್ | 845 | 2 | 0 | 2 | 315 | 163 | 152 | 145 |
| 18 | ಸಮರ್ಥನಂ | 750 | 2 | 0 | 2 | 218 | 112 | 106 | 81 |
| 19 | ಮಲಂಕರಾ | 450 | 1 | 0 | 1 | 100 | 46 | 54 | 46 |
| 20 | ಎನ್‌ಐಎಸ್‌ಐ | 3200 | 1 | 0 | 1 | 140 | 96 | 44 | 62 |
| 21 | ಸಾಹಿತಿ ಸಿಸ್ಟಮ್ಸ್ | 1590 | 2 | 0 | 2 | 61 | 27 | 34 | 27 |
| 22 | ಜಿಟಿ&ಟಿಸಿ | 300 | 0 | 0 | 0 | 0 | 0 | 0 | 0 |
| ಸಸ್ಪೆಂಡ್ ಆದ ಸಂಸ್ಥೆಗಳು | | | | | | 1157 | 736 | 290 | 16 |
| | **ಒಟ್ಟು** | **57289** | **77** | **10** | **96** | **27699** | **21825** | **5453** | **13879** |

**ಬೆಂಬಲ ವೆಚ್ಚದಲ್ಲಿನ ಚಟುವಟಿಕೆಗಳು**

**ಕೌಶಲ್ಯ ಬೇಡಿಕೆ ಕಾರ್ಯಾಗಾರ:**

ಉದ್ಯೋಗ ಮತ್ತು ತರಬೇತಿ, ಕಾರ್ಮಿಕ ಇಲಾಖೆ, ಕೈಗಾರಿಕೆ ಮತ್ತು ವಾಣಿಜ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಯುವ ಸಬಲೀಕರಣ ಇಲಾಖೆ–ಎನ್‌ವೈಕೆ ಮತ್ತು ಕಾರ್ಯನಿರ್ವಹಿಸುತ್ತಿರುವ ಯೋಜನಾ ಅನುಷ್ಠಾನ ಸಂಸ್ಥೆ/ ಯೋಜನಾ ಬೆಂಬಲ ಸಂಸ್ಥೆಗಳಿಂದ ಯೋಜನೆಯ ಅನುಸಾರ ಕೌಶಲ್ಯ ಬೇಡಿಕೆ ಕಾರ್ಯಾಗಾರವನ್ನು ಜಿಲ್ಲಾ ಮಟ್ಟದಲ್ಲಿ ಆಯೋಜಿಸಲಾಗಿದೆ. ಇದುವರೆವಿಗೂ 24 ಕಾರ್ಯಾಗಾರಗಳು ಆಯೋಜಿಸಲಾಗಿದ್ದು, ಉಳಿದ ಕಾರ್ಯಾಗಾರಗಳನ್ನು ಆಯೋಜಿಸಲು ಸೂಚಿಸಲಾಗಿದೆ.

**ಅಭ್ಯರ್ಥಿಗಳ ಒಗ್ಗೂಡಿಸುವಿಕೆ:**

ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳ ಸಹಯೋಗದೊಂದಿಗೆ, ಸಂಬಂಧಪಟ್ಟ ಯೋಜನಾ ಅನುಷ್ಠಾನ ಸಂಸ್ಥೆಗಳು ಶಿಬಿರಗಳನ್ನು ಗ್ರಾಮ/ಗ್ರಾಮ ಪಂಚಾಯತ್ ಮಟ್ಟದಲ್ಲಿ ಆಯೋಜಿಸಿ ಅಭ್ಯರ್ಥಿಗಳ ಆಯ್ಕೆಗಾಗಿ ಸಮಾಲೋಚನಾ ಕಾರ್ಯಕ್ರಮವನ್ನು ಗ್ರಾಮ ಸಭೆಗಳ ಮೂಲಕ ಏರ್ಪಡಿಸಿದೆ. ಇದುವರೆವಿಗೂ, 29500 ಅಭ್ಯರ್ಥಿಗಳಿಗೆ ಗ್ರಾಮ ಹಾಗೂ ತಾಲ್ಲೂಕು ಪಂಚಾಯತ್‌ಗಳಿಂದ ಜಿಲ್ಲೆಗಳ ಮೂಲಕ ಗ್ರಾಮ ಸಭೆಗಳ ಮೂಲಕ ಆಯ್ಕೆ ಮಾಡಲಾಗಿದೆ.

**ಉದ್ಯೋಗ ಮೇಳ:**

ಇದುವರೆವಿಗೂ ಐದು ಉದ್ಯೋಗ ಮೇಳಗಳನ್ನು ಕಾರವಾರ, ಬೆಂಗಳೂರು ನಗರ, ಕೋಲಾರ, ಕಲಬುರ್ಗಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಆಯೋಜಿಸಿದ್ದು, 6500 ನಿರುದ್ಯೋಗಿಗಳಿಗೆ ಸೇರಿಸಿ 627ಅಭ್ಯರ್ಥಿಗಳಿಗೆ ತರಬೇತಿ ಕೊಡಲು ಆಯ್ಕೆ ಮಾಡಿದ್ದು 1027 ಅಭ್ಯರ್ಥಿಗಳಿಗೆ ಉದ್ಯೋಗವನ್ನು ಕಲ್ಪಿಸಲಾಯಿತು.

**ದೀನ್ ದಯಾಳ್ ಉಪಾಧ್ಯಾಯ ವಾರ್ಷಿಕೋತ್ಸವ ದಿನ ಆಚರಣೆ:**

ಅಕ್ಟೋಬರ್ 2016ರ ತಿಂಗಳಿನಲ್ಲಿ ದೀನ್ ದಯಾಳ್ ಉಪಾಧ್ಯಾಯ ವಾರ್ಷಿಕೋತ್ಸವ ದಿನ ಆಚರಣೆಯನ್ನು ಓರಿಯನ್ ಸಂಸ್ಥೆಯ ಸಹಯೋಗದೊಂದಿಗೆ ಒಂದು ವರ್ಷ ಉದ್ಯೋಗ ಮುಗಿಸಿರುವ ಫಲಾನುಭವಿಗಳೊಂದಿಗೆ ಆಚರಿಸಲಾಯಿತು.

**ಸಾಗರಮಾಲ ಯೋಜನೆ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ:**

ಗ್ರಾಮೀಣಾಭಿವೃದ್ಧಿ ಸಚಿವಾಲಯದ ಸೂಚನೆಗಳನ್ವಯ ಹಾಗೂ ನಿರ್ದೇಶನಗಳಿಗನುಸಾರ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ "ಸಾಗರ ಮಾಲ" ಎಂಬ ಯೋಜನೆಯನ್ನು ಡಿಡಿಯು–ಜಿಕೆವೈ ಅಡಿಯಲ್ಲಿ (ಕೊಲ್ಲಿ ಪ್ರದೇಶಗಳಲ್ಲಿ ಬರುವ ಜಿಲ್ಲೆಗಳು ಹಾಗೂ ಎಲ್ಲಿ ಹಡಗು ನಿರ್ಮಾಣ ಮತ್ತು ಬಂದರುಗಳಿರುವ ಜಾಗದಲ್ಲಿ ನಿರುದ್ಯೋಗಿ ಯುವಜನತೆಗೆ ಕೌಶಲ್ಯ ತರಬೇತಿ ಕೊಟ್ಟು ಉದ್ಯೋಗ ಕಲ್ಪಿಸಲಾಗುವುದು) ಅನುಷ್ಠಾನಗೊಳಿಸಲಾಗುತ್ತಿದ್ದು, ಕೌಶಲ್ಯ ಅಭಿವೃದ್ಧಿಯೊಂದಿಗೆ ಉದ್ಯೋಗ ದೊರಕಿಸಿಕೊಡುವುದನ್ನು National Shipping Corporation & Development ಸಂಸ್ಥೆಯಡಿ ಒಪ್ಪಂದ ಮಾಡಿಕೊಳ್ಳಲಾಗಿದೆ.

ಇದರ ಮುಖ್ಯ ಗುರಿ ಎಂದರೆ ಹಡಗು ನಿರ್ವಹಣೆ ಮತ್ತು ಬಂದರುಗಳ ಸಮಗ್ರ ಅಭಿವೃದ್ಧಿ ಯೋಜನೆ ಮತ್ತು ಕೈಗಾರಿಕಾ ವಲಯಗಳಲ್ಲಿ ಚಾಲಕರು, ತಾಂತ್ರಿಕರು, ಆರ್ಥಿಕ ವಲಯ ಪ್ರದೇಶಗಳಲ್ಲಿನ ಸಹಾಯಕರನ್ನು ಆಯ್ಕೆ ಮಾಡಿ ಕರಾವಳಿ ಪ್ರದೇಶಗಳಲ್ಲಿನ ಬಂದರುಗಳಲ್ಲಿ ಆರ್ಥಿಕ ಚಟುವಟಿಕೆಯನ್ನು ಹೆಚ್ಚಿಸುವುದಾಗಿದೆ. ಇದರನ್ವಯ ಅಭ್ಯರ್ಥಿಗಳ ತರಬೇತಿಗಾಗಿ ಈ ಯೋಜನೆಯನ್ನು ಮೇಲಿನ 3 ಜಿಲ್ಲೆಗಳಲ್ಲಿ 15 ಆಗಸ್ಟ್ 2015 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಇದುವರೆಗೆ ದಿನಾಂಕ 31.03.2017ರ ಅಂತ್ಯಕ್ಕೆ ಸುಮಾರು 320 ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿ ಕೊಟ್ಟಿದ್ದು 272 ಅಭ್ಯರ್ಥಿಗಳಿಗೆ ಉದ್ಯೋಗ ಕಲ್ಪಿಸಲಾಗಿದೆ.

**ಕರ್ನಾಟಕ ಮಲ್ಟಿ ಸೆಕ್ಟೋರಿಯಲ್ ಪೌಷ್ಠಿಕ ಪ್ರಾಯೋಗಿಕ ಯೋಜನೆ**

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕುಗಳಲ್ಲಿನ ಕಲಿಕೆಯ ಆಧಾರದ ಮೇಲೆ, ಈ ಯೋಜನೆಯು, ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕು ಮತ್ತು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲು ಜಪಾನ್ ಸೋಶಿಯಲ್ ಡೆವೆಲಪಮೆಂಟ್ ಫಂಡ್ ಮತ್ತು ವಿಶ್ವ ಬ್ಯಾಂಕ್ ನೆರವಿನ ಅನುದಾನ ದೊರೆತಿರುತ್ತದೆ.

**ಯೋಜನೆಯ ಮುಖ್ಯ ಉದ್ದೇಶಗಳು**

ಅ. ಪೋಷಕಾಂಶ ಕೊರತೆ ಇರುವ ಶಿಶುಗಳ ಅಂದರೆ 3 ವರ್ಷದೊಳಗಿನ ಮಕ್ಕಳು ವಿಶೇಷವಾಗಿ 0–2 ವರ್ಷ ಮತ್ತು ಕಿಶೋರಿಯರು ಹಾಗೂ ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರ ಪೌಷ್ಟಿಕತೆ ತೀರ ಕಡಿಮೆಯಾಗದಂತೆ ನೋಡಿಕೊಳ್ಳುವುದು.

ಆ. ಮೂರು ವರ್ಷದೊಳಗಿನ ಮಕ್ಕಳಲ್ಲಿ ಅದರಲ್ಲೂ ವಿಶೇಷವಾಗಿ 0–2 ವರ್ಷದೊಳಗಿನ ಮಕ್ಕಳಲ್ಲಿ ದೃಢೀಕೃತವಾದ ಹಾಗೂ ತೀವ್ರವಾದ ಅಪೌಷ್ಟಿಕತೆಯನ್ನು ತಡೆಗಟ್ಟುವುದು.

ಇ. ಮೂರು ವರ್ಷದೊಳಗಿನ ಮಕ್ಕಳಲ್ಲಿ, ಕಿಶೋರಿಯರಲ್ಲಿ ಹಾಗೂ ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರಲ್ಲಿ ರಕ್ತಹೀನತೆ ಮತ್ತು ಸೂಕ್ಷ್ಮ ಪೋಷಕಾಂಶಗಳ ಕೊರತೆಯನ್ನು ಕಡಿಮೆಗೊಳಿಸುವುದು.

ಈ. ಕಿಶೋರಿಯರಲ್ಲಿ ಹಾಗೂ ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರಲ್ಲಿ ಅಪೌಷ್ಟಿಕತೆಯನ್ನು ಕಡಿಮೆಗೊಳಿಸುವುದು.

ಉ. ಕಡಿಮೆ ತೂಕದ ಶಿಶುಗಳ ಜನನ ಪ್ರಮಾಣವನ್ನು ಕಡಿಮೆಗೊಳಿಸುವುದು.

**ಯೋಜನೆಯ ಅವಧಿ:** ಈ ಯೋಜನೆಯು 3 ವರ್ಷಗಳ ಅವಧಿಯಾಗಿದ್ದು, ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕು ಮತ್ತು ರಾಯಚೂರ ಜಿಲ್ಲೆಯ ದೇವದುರ್ಗ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳ್ಳುತ್ತಿದೆ.

**ಯೋಜನೆಯ ಫಲಾನುಭವಿಗಳು**

1. 3 ವರ್ಷದೊಳಗಿನ ಮಕ್ಕಳು
2. 11 ರಿಂದ 18 ವರ್ಷದ ಕಿಶೋರಿಯರು
3. ಗರ್ಭಿಣಿ ಮಹಿಳೆಯರು ಹಾಗು ಹಾಲುಣಿಸುವ ತಾಯಂದಿರು

**ಯೋಜನೆಯ ಅನುಷ್ಠಾನ ಕಾರ್ಯತಂತ್ರ**

ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರೇತರ ಸಂಸ್ಥೆಯು ಆಯ್ಕೆಯಾಗಿದ್ದು, ಈ ಸಂಸ್ಥೆಯ ಮುಖ್ಯ ಜವಾಬ್ದಾರಿಗಳೇನೆಂದರೆ, ಯೋಜನೆಯ ಪೌಷ್ಠಿಕ ಆಹಾರ ಘಟಕ ಸ್ಥಾಪಿಸುವುದು ಮತ್ತು ತಯಾರಿಕೆಯಲ್ಲಿ ಸ್ವ–ಸಹಾಯ ಸಂಘಗಳನ್ನು ತರಬೇತಿಗೊಳಿಸುವುದು ಹಾಗೂ ತಯಾರಿಸಿದ ಆಹಾರ ಪೊಟ್ಟಣಗಳನ್ನು ಗ್ರಾಮ ಸ್ವಯಂ ಸೇವಕರ ಮೂಲಕ ಫಲಾನುಭವಿಗಳಿಗೆ ವಿತರಿಸುವುದು.

**ಒಟ್ಟಾರೆ ಪ್ರಗತಿ:**

1. ಎರಡು ದಿನಗಳ ಆರಂಭಿಕ ಕಾರ್ಯಾಗಾರವನ್ನು ರಾಯಚೂರ ಮತ್ತು ಕಲಬುರಗಿಜಿಲ್ಲೆಯ ಜಿಲ್ಲಾ ಪಂಚಾಯತ್ ಪ್ರತಿನಿಧಿಗಳಿಗೆ, ಓಖಕಅಅಆ ಬೆಂಗಳೂರಿನಲ್ಲಿ ಏರ್ಪಡಿಸಲಾಗಿತ್ತು.
2. ದಿನಾಂಕ 06–12–2014 ಮತ್ತು 29–04–2015 ರಂದು ಉನ್ನತ ಮಟ್ಟದ ಅಧ್ಯಕ್ಷರಾದ ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಯಿತು.
3. ದಿನಾಂಕ 29–04–2015 ರಂದು ಉನ್ನತ ಮಟ್ಟದ ಅಧ್ಯಕ್ಷರಾದ ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಸಭೆಯಲ್ಲಿ ಕರ್ನಾಟಕ ಹೆಲ್ತ್ ಪ್ರಮೋಷನ್‌ಟ್ರಸ್ಟ, (KHPT) ಸಂಸ್ಥೆಯೊಂದಿಗೆ ತಿಳುವಳಿಕೆ ಒಪ್ಪಂದಕ್ಕೆ ಅನುಮೋದನೆ ಪಡೆಯಲಾಯಿತು ಮತ್ತು ವಿಶ್ವಬ್ಯಾಂಕ್‌ನಿಂದ ಒಪ್ಪಿಗೆ ಪಡೆಯಲಾಯಿತು.
4. ಯೋಜನಾ ಮೇಲ್ವಿಚಾರಣಾ ಘಟಕವು, ಸಲಹೆಗಾರರು ಕೆಸಿಎನ್‌ಎಮ್ ನೇತೃತ್ವದಲ್ಲಿ ರಾಜ್ಯ ಮಟ್ಟದ ಇತರ ಸಿಬ್ಬಂದಿಯೊಂದಿಗೆ ಕಾರ್ಯನಿರ್ವಹಣೆ ಮಾಡುತ್ತಿದೆ.
5. KHPT ಸಂಸ್ಥೆಯು 2 ತಾಲ್ಲೂಕುಗಳಲ್ಲಿ ಯೋಜನಾ ಸಿಬ್ಬಂದಿ ಮತ್ತು ಕ್ಷೇತ್ರ ಸಿಬ್ಬಂದಿಯ ನೇಮಕಾತಿಯ ಪ್ರಕ್ರಯೆಯನ್ನು ಪೂರ್ಣಗೊಳಿಸಿದೆ.
6. ಯೋಜನಾ ಸಿಬ್ಬಂದಿ ಮತ್ತು ಕ್ಷೇತ್ರ ಸಿಬ್ಬಂದಿಯ ತರಬೇತಿಯನ್ನು ಪ್ರಾಯೋಗಿಕ ಯೋಜನೆಯ ಗುರಿ ಮತ್ತು ಉದ್ದೇಶಗಳಿಗನುಗುಣವಾಗಿ ಪೂರ್ಣಗೊಳಿಸಿದೆ.
7. ಬಹು ಮಾದ್ಯಮ ಸೇವೆಗಳನ್ನು ಒದಗಿಸಲು ಮೇ॥ ಆಕಾರ ಅಡ್ವರ್ಟೈಜಿಂಗ್& ಮಾರ್ಕೆಟಿಂಗ್ ಸಂಸ್ಥೆಯು ಆಯ್ಕೆಯಾಗಿದೆ.
8. ಈ ಯೋಜನೆಯು ಟಾರ್ಗೆಟ್ ತಾಲ್ಲೂಕುಗಳಾದ ಚಿಂಚೋಳಿ ಮತ್ತು ದೇವದುರ್ಗ ತಾಲ್ಲೂಕುಗಳಲ್ಲಿ ಮತ್ತು ಕಂಟ್ರೋಲ್ ತಾಲ್ಲೂಕುಗಳಾದ ಜೇವರ್ಗಿ ಮತ್ತು ಲಿಂಗಸೂಗುರುಗಳಲ್ಲಿ ಮೂಲ ಸಮೀಕ್ಷೆಯನ್ನು ನಡೆಸಲು ಆಕ್ಸಫರ್ಡ ಪಾಲಿಸಿ ಮ್ಯಾನೆಜ್‌ಮೆಂಟ್, ದೆಹಲಿ, ಸಂಸ್ಥೆಯನ್ನು ವಿಶ್ವಬ್ಯಾಂಕ್ ಆಯ್ಕೆ ಮಾಡಿದೆ.
9. ಆಹಾರ ಉತ್ಪಾದನಾ ಘಟಕ(EDF)ಪೂರಕ ಅಂಶಗಳಿಗೆ ಸಂಬಂಧಿಸಿದಂತೆ ಪೂರ್ವತಯಾರಿ ಆರಂಭಿಸಲಾಗಿದೆ.
10. ಸಹಗಾಮಿ ಮೇಲ್ವಿಚಾರಣೆ ಸಂಸ್ಥೆಯ ಆಯ್ಕೆಯು ಅಂತಿಮಗೊಂಡ ಮೂರು ಸಂಸ್ಥೆಗಳಿಗೆ ಆರ್‌ಎಫ್‌ಪಿ ಯನ್ನು ಕಳುಹಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.
11. ಆಹಾರ ಉತ್ಪಾದನಾ ಘಟಕ(EDF)ಸಂಬಂಧಿಸಿದಂತೆ GAIN ಸಂಸ್ಥೆಯು ಹಣಕಾಸು ನೆರವಿನ ಸಹಾಯ ನೀಡಲು ಮುಂದೆ ಬಂದಿದ್ದು ಅಂದಾಜು 420 ಲಕ್ಷ ಹಣಕಾಸು ನೆರವಿಗೆ ಸಂಬಂಧಿಸಿದಂತೆ ಕರಾರು ಪತ್ರದ ಪ್ರಕ್ರಿಯೆ ಪ್ರಗತಿಯಲ್ಲಿದೆ.

12. KHPT ಸಂಸ್ಥೆಯು ಮೂಲ ಸಮೀಕ್ಷೆಯನ್ನು ಟಾರ್ಗೆಟ್ ತಾಲ್ಲೂಕುಗಳಾದ ಚಿಂಚೋಳ್ಳಿ ಮತ್ತು ದೇವದುರ್ಗಗಳಲ್ಲಿ ಪೂರ್ಣಗೊಳಿಸಿದ್ದು, 37,781 ಯೋಜನೆಯ ಫಲಾನುಭವಿಗಳ ಆಯ್ಕೆ ಪೂರ್ಣಗೊಳಿಸಿದೆ (3 ವರ್ಷದೊಳಗಿನ ಮಕ್ಕಳು,11 ರಿಂದ 18 ವರ್ಷದ ಕಿಶೋರಿಯರು, ಗರ್ಭಿಣಿ ಮಹಿಳೆಯರು, ಹಾಲುಣಿಸುವ ತಾಯಂದಿರು).
13. 433 ಗ್ರಾಮ ಸ್ವಯಂ ಸೇವಕರ ಆಯ್ಕೆ ಮತ್ತು ತರಬೇತಿ ಪೂರ್ಣಗೊಳಿಸಲಾಗಿದೆ.
14. ಯೋಜನೆಯ ಮೇಲ್ವಿಚಾರಕರಿಗೆ ಮತ್ತು ಗ್ರಾಮ ಸ್ವಯಂ ಸೇವಕರಿಗೆ ಆರೋಗ್ಯ ಮತ್ತು ಪೌಷ್ಠಿಕ ಕಾರ್ಡ್ ತುಂಬುವ ಕುರಿತು TOT ತರಬೇತಿಯನ್ನು ಪೂರ್ಣಗೊಳಿಸಲಾಗಿದೆ.
15. 35,006 ಆರೋಗ್ಯ ಮತ್ತು ಪೌಷ್ಠಿಕ ಕಾರ್ಡ್ ಮುದ್ರಣ ಕಾರ್ಯ ಪೂರ್ಣಗೊಳಿಸಲಾಗಿದೆ.
16. ಸಂವಹನ ಸಾಮಾಗ್ರಿಗಳಾದ ಪೋಸ್ಟರ್ಸ್ ಮತ್ತು ಫ್ಲಿಪ್‌ಚಾರ್ಟ್ಸ್‌ಗೆ ಸಂಬಂಧಿಸಿದಂತೆ ಅಭಿವೃದ್ಧಿಪಡಿಸಲಾಗಿದೆ.
17. ಮೊದಲನೇ ಹಂತದ ಬಹು ಮಾಧ್ಯಮ ಸಂವಹನ ಸಾಮಾಗ್ರಿಗಳಾದ ಪೋಸ್ಟರ್ಸ್, ಫ್ಲಿಪ್‌ಚಾರ್ಟ್ಸ್ ಮತ್ತು ಗೋಡೆ ಬರಹಗಳನ್ನು ಯೋಜನೆಯ ಮುಖ್ಯ ಸಂದೇಶಗಳನ್ನು ಪೌಷ್ಠಿಕತೆ ಮತ್ತು ಆರೋಗ್ಯ ಮಾಹಿತಿಗಳೊಂದಿಗೆ ಅಭಿವೃದ್ಧಿ ಮತ್ತು ಮುದ್ರಣ ಮಾಡಿಯೋಜನೆಯಕಾರ್ಯಕ್ಷೇತ್ರದಲ್ಲಿ ಹಂಚಿಕೆ ಮಾಡಲಾಗಿದೆ.
18. ಬಹು ಮಾಧ್ಯಮ ಸಂಸ್ಥೆ ಮೆ॥ ಆಕಾರ್ ಅಡ್ವರ್ಟೈಜ್‌ಮೆಂಟ್ ಮತ್ತು ಮಾರ್ಕೆಟಿಂಗ್ ಪ್ರೈ.ಲಿ., ರವರು ಮೊದಲನೇ ಹಂತದ ಸಂವಹನ ಚಟುವಟಿಕೆಗಳಲ್ಲಿ ಮುಖ್ಯವಾದ ರೇಡಿಯೋ ಜಿಂಗಲ್ಸ್ ಮತ್ತು ದೂರದರ್ಶನ ತುಣುಕುಗಳನ್ನು ಸ್ಥಳೀಯ ರೇಡಿಯೋಕೇಂದ್ರ ಮತ್ತು ಕೇಬಲ್ ಛಾನೆಲ್‌ಗಳಲ್ಲಿ ಪ್ರಸಾರದ ಕಾರ್ಯ ಯಶಸ್ವಿಯಾಗಿ ಮುಗಿಸಿದ್ದಾರೆ.
19. ಬಹು ಮಾಧ್ಯಮ ಸಂವಹನ ಚಟುವಟಿಕೆಯ ಎರಡನೇ ಹಂತದ ವಿಷಯಗಳು/ತಂತ್ರಗಳು ಸಂಪೂರ್ಣಗೊಳಿಸಲಾಗಿದೆ.
20. ಎರಡನೇ ಹಂತದ ಬಹು ಮಾಧ್ಯಮ ಚಟುವಟಿಕೆಗಳು ಯೋಜನೆಯ ಕ್ಷೇತ್ರ ಕಾರ್ಯದಲ್ಲಿ ಆರಂಭಗೊಂಡಿವೆ.
21. ಎರಡನೇ ಹಂತದ ಬಹು ಮಾಧ್ಯಮ ಚಟುವಟಿಕೆಗಳಾದ ಪೋಸ್ಟರ್ಸ್ ಮತ್ತು ಫ್ಲಿಪ್ ಚಾರ್ಟ್ಸ್‌ಗಳನ್ನು ಗ್ರಾಮ ಪೌಷ್ಠಿಕ ಸಹಾಯಕರಿಗೆ ತಲುಪಿಸಲಾಗಿದ್ದು ಮತ್ತು ತರಭೇತಿಯನ್ನು ನೀಡಲಾಗಿದೆ.
22. ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ಆಹಾರ ತಯಾರಿಕೆಯನ್ನು ದಿನಾಂಕ: 25–10–2016 ರಂದು ಮತ್ತು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿ ಇಡಿಎಫ್ ಆಹಾರ ಉತ್ಪಾದನೆಯನ್ನು ದಿನಾಂಕ: 26–12–2016 ರಿಂದ ಆರಂಭಿಸಲಾಗಿದೆ.
23. ಕರ್ನಾಟಕ ಮಲ್ಟಿ–ಸೆಕ್ಟೋರಲ್ ಪೌಷ್ಠಿಕ ಪ್ರಾಯೋಗಿಕ ಯೋಜನೆಯ ಕಾರ್ಯಕಾರಿಣಿ ಸಮಿತಿ ಸಭೆ ದಿನಾಂಕ: 05–01–2017 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.
24. ಕರ್ನಾಟಕ ಮಲ್ಟಿ–ಸೆಕ್ಟೋರಲ್ ಪೌಷ್ಠಿಕ ಪ್ರಾಯೋಗಿಕ ಯೋಜನೆಯ ಕಾರ್ಯಾಗಾರವನ್ನು ದಿನಾಂಕ: 02–02–2017 ರಂದು ಕರ್ನಾಟಕ ಸಮಗ್ರ ಪೌಷ್ಠಿಕ ಅಭಿಯಾನ ಮತ್ತು ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆಯ ಸಂಯೋಜನೆಯಲ್ಲಿ ನಡೆಸಲಾಯಿತು.
25. 30 ಗಂಟೆಗಳ ಮಾದರಿಯಾದ ಆಹಾರ ಪೌಷ್ಠಿಕ ರಕ್ಷಣೆ ಮತ್ತು ಸಾರ್ವಜನಿಕ ನೀತಿಗೆ ಸಂಬಂಧಿಸಿದ ಸ್ನಾತಕೋತ್ತರ ಪದವಿಯಲ್ಲಿ ಈ ವಿಷಯ ಅಳವಡಿಸಿಕೊಳ್ಳಲು ಸಮಾಜ ಕಾರ್ಯ, ಗೃಹ ವಿಜ್ಞಾನ ಮತ್ತು ಆಹಾರ ಪೌಷ್ಠಿಕ ವಿಭಾಗದ ಮುಖ್ಯಸ್ಥರೊಂದಿಗೆ ದಿನಾಂಕ: 25–03–2017 ರಂದು ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆ ನಡೆಸಲಾಯಿತು.
26. ಕಡಿಮೆ ಬೆಲೆಯ ಇಡಿಎಫ್ ಅಧ್ಯಾಯನಕ್ಕಾಗಿ ಇಓಐ ಯನ್ನು ದಿನಾಂಕ: 17–04–2017 ರಂದು ರಾಷ್ಟ್ರೀಯ ಪತ್ರಿಕೆಗಳಲ್ಲಿ ಕರೆಯಲಾಗಿದೆ.

**ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಸಾಧನೆ**

**2016–17 ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿ/ಸಿಬ್ಬಂದಿಗಳ ವಿವರ**

| ಕ್ರ. ಸಂ. | ವರ್ಗ | ಒಟ್ಟು ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ಪುರುಷರು | ಮಹಿಳೆಯರು | ಪ.ಜಾ. | ಪ.ಪಂ |
|---|---|---|---|---|---|---|
| 1 | ಎ | 03 | 01 | 02 | | |
| 2 | ಬಿ | 01 | | 01 | 01 | |
| 3 | ಸಿ | | | | | |
| 4 | ಡಿ | | | | | |

**2016–17 ನೇ ಸಾಲಿನಲ್ಲಿ ಸೇವೆ ಸಲ್ಲಿಸುತ್ತಿರುವ ಹೊರಗುತ್ತಿಗೆ ನೌಕರರ ವಿವರ**

| ಕ್ರ. ಸಂ. | ಹುದ್ದೆ | ಸಂಖ್ಯೆ |
|---|---|---|
| 1 | ಡಾಟಾ ಎಂಟ್ರಿ ಆಪರೇಟರ್ಸ್ | 37 |
| 2 | ಗ್ರೂಪ್ ಡಿ | 04 |
| 3 | ವಾಹನ ಚಾಲಕರು | 03 |
| 4 | ಪ್ರೊಗ್ರಾಂ ಮ್ಯಾನೇಜರ್/ಸಲಹೆಗಾರರು/ಯೋಜನಾ ನಿರ್ವಾಹಕರು/ಸಹಾಯಕರು | 243 |
| | **ಒಟ್ಟು** | **287** |

**ತರಬೇತಿ ಪಡೆದ ಸರ್ಕಾರಿ ನೌಕರರು/ಅಧಿಕಾರೇತರ ಚುನಾಯಿತಿ ಪ್ರತಿನಿಧಿಗಳು/ಸರ್ಕಾರೇತರ ಸಂಸ್ಥೆಗಳು**

| ತರಬೇತಿ ಪಡೆದ ಸರ್ಕಾರಿ ನೌಕರರು / ಅಧಿಕಾರಿಗಳು | | | | ಚುನಾಯಿತ ಪ್ರತಿನಿಧಿಗಳು | | | ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು | ಒಟ್ಟು |
|---|---|---|---|---|---|---|---|---|
| ರಾಜ್ಯ ಮಟ್ಟದ | ಜಿಲ್ಲಾ ಮಟ್ಟದ | ತಾಲ್ಲೂಕು ಮಟ್ಟದ | ಗ್ರಾಮ ಮಟ್ಟದ | ಜಿ.ಪಂ | ತಾ.ಪಂ | ಗ್ರಾ.ಪಂ | | |
| – | 20 | 131 | – | – | – | – | – | 151 |

**ವಿಧಾನಸಭೆ, ವಿಧಾನ ಪರಿಷತ್ತು, ಗಮನ ಸೆಳೆಯುವ ಸೂಚನೆ ಹಾಗೂ ಭರವಸೆಗಳಿಗೆ ಉತ್ತರಿಸಿದ ವಿವರ**

| ವಿಧಾನಸಭೆ ಪ್ರಶ್ನೆಗಳು | | ವಿಧಾನ ಪರಿಷತ್ತು ಪ್ರಶ್ನೆಗಳು | | ಗಮನ ಸೆಳೆಯುವ ಸೂಚನೆಗೆ ಉತ್ತರಗಳು | | ಮುಂದಿನ ಅಧಿವೇಶನದಲ್ಲಿ ಉತ್ತರಿಸಬೇಕಾದ ಪ್ರಶ್ನೆಗಳು | |
|---|---|---|---|---|---|---|---|
| ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ವಿಧಾನಸಭೆ | ವಿಧಾನ ಪರಿಷತ್ತು |
| 44 | 44 | 26 | 26 | – | – | – | – |

**ಮಾಹಿತಿ ಹಕ್ಕು ಅಧಿನಿಯಮ–2005**

| ಸ್ವೀಕರಿಸಿದ ಒಟ್ಟು ಅರ್ಜಿಗಳು | ನಿಗದಿತ ಕಾಲಾವಧಿಯಲ್ಲಿ ಉತ್ತರಿಸಿದ | ಸ್ವೀಕರಿಸಿದ ಅರ್ಜಿ ಶುಲ್ಕ + ದಾಖಲೆ ಪ್ರತಿಗಳನ್ನು ನೀಡಲು | ಮೇಲ್ಮನವಿ ನಂತರ ಇತ್ಯರ್ಥಗೊಳಿಸಿದ ಅರ್ಜಿಗಳು | | ವಿಧಿಸಿದ ದಂಡ (ರೂ.ಗಳಲ್ಲಿ) |
|---|---|---|---|---|---|
| | | | ಮೇಲ್ಮನವಿ | ಮಾಹಿತಿ ಹಕ್ಕು | |

| | ಅರ್ಜಿಗಳು | ಸ್ವೀಕರಿಸಿದ ಮೊತ್ತ (ರೂ.ಗಳಲ್ಲಿ) | ಪ್ರಾಧಿಕಾರ ಇತ್ಯರ್ಥಗೊಳಿಸಿದ ಸಂಖ್ಯೆ | ಆಯೋಗದಿಂದ ಇತ್ಯರ್ಥಗೊಳಿಸಿದ ಸಂಖ್ಯೆ | |
|---|---|---|---|---|---|
| 28 | 28 | 160 | – | – | – |

* * * * * *